ಅಧ್ಯಕ್ಷರು.— ಅರ್ಜಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ನಾವು ಒಂದು ಪ್ರಿವಿಲೇಜ್ ಮೋಷನ್‌ನ್ನು ತಮಗೆ ಕಳುಹಿಸಿಕೊಟ್ಟಿದ್ದೆನು. ದಯವಿಟ್ಟು ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಸ್ವಲ್ಪ ಹೊತ್ತು ಇರಿ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ತಂದಿದ್ದಾರೆ ಅದು ಮುಗಿದ ಕೂಡಲೇ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಪ್ರಶ್ನೋತ್ತರ ವೇಳೆ ಮುಗಿದ ಕೂಡಲೇ ನನ್ನ ವಿಷಯವನ್ನು ತಾವು ತೆಗೆದುಕೊಳ್ಳಬೇಕಾಗಿತ್ತು. ಈಗಾಗಲೇ ತಡವಾಗಿದೆ. ಆದ್ದರಿಂದ ದಯವಿಟ್ಟು ನನ್ನ ನೋಟೀಸಿಗೆ ಆದ್ಯತೆ ಕೊಡಬೇಕು.

ಅಧ್ಯಕ್ಷರು.—ಅವರದ್ದು ಮುಗಿದ ನಂತರ ನಿಮ್ಮದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಆಗಬಹುದು ಸ್ವಾಮಿ, ಅನಂತರವಾದರೂ ದಯವಿಟ್ಟು ತೆಗೆದುಕೊಳ್ಳಿ.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಜಿಲ್ಲಾ ಪರಿಷತ್ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯ ಪಟ್ಟಿಯನ್ನು ತಯಾರಿಸಿ ಅವರನ್ನು ನೇಮಕಾತಿ ಮಾಡಲು ಹೊರಡಿಸಿರುವ ಆಜ್ಞೆ ಕುರಿತು

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಮಾನ್ಯ ವಿರೋಧಪಕ್ಷದ ನಾಯಕಿಯವರು).—ಮಾನ್ಯ ಅಧ್ಯಕ್ಷರೆ, ನಾವು ಒಂದು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ತಮಗೆ ಕಳುಹಿಸಿಕೊಟ್ಟಿದ್ದೇವೆ. ಅದು ಈ ರೀತಿ ಇದೆ:

> ''ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಕಾನೂನನ್ನು ಉಲ್ಲಂಘಿಸಿ ಪ್ರಜಾ ಪ್ರಭುತ್ವದ ಮೂಲಭೂತ ತತ್ವಗಳನ್ನೇ ಬದಿಗೊತ್ತಿ, ಜಿಲ್ಲಾ ಪರಿಷತ್ತು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯ ಮತದಾರರ ಪಟ್ಟಿಯನ್ನು ತಯಾರಿಸಿ ವಿಭಾಗಾಧಿಕಾರಿಗಳು ಹೊರಡಿಸಿದ ಪ್ರಕಟಣೆ ಮತ್ತು ಮಂಡಲ ಪಂಚಾಯತ್‌ಗಳಿಗೆ ನೇಮಕಾತಿಯನ್ನು ಮಾಡಲು ಸರ್ಕಾರ ಹೊರಡಿಸಿರುವ ಕಾನೂನು ಮತ್ತು ಪ್ರಜಾಪ್ರಭುತ್ವ ನೀತಿಯ ಸಮಾಧಿ ಮಾಡಲು ಹೊರಟಿರುವ ಸರ್ಕಾರದ ನೀತಿಯನ್ನು ಕುರಿತು ಚರ್ಚಿಸುವುದು''.

ಮಾನ್ಯ ಅಧ್ಯಕ್ಷರೆ, ಮಾನ್ಯ ಹೆಗಡೆಯವರ ಸರ್ಕಾರ ಡೆಮಾಕ್ರಸಿ, ಡೆಮಾಕ್ರೆಟಿಕ್ ಪ್ರಿನ್ಸಿಪಲ್ಸ್‌ಗೆ ಮೊರೆ ಹೊಕ್ಕು ಪ್ರಜಾಪ್ರಭುತ್ವ ನೀತಿಯನ್ನು ಹೊಂದಿಸಿಕೊಂಡು ಈ ಪ್ರಜಾಪ್ರಭುತ್ವ ನೀತಿಗೆ ಹೊಂದಿಕೊಂಡು ನಾವು ಆಡಳಿತವನ್ನು ನಡೆಸುತ್ತೇವೆಂದು ಹೇಳಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಚುನಾವಣೆಗಳನ್ನು ನಡೆಸಿತು. ನಿಮ್ಮ ಅಧಿಕಾರ ನಿಮಗೇ ಎಂದು ಜನರಿಗೆ ಹೇಳಿ ಚುನಾವಣೆಗಳನ್ನು ಇವರು ನಡೆಸಿದ್ದಾರೆ. ಆದರೆ ಈ ಪ್ರಜಾಪ್ರಭುತ್ವದ ತತ್ವಗಳಿಗೆ ವಿರುದ್ಧವಾಗಿ ಕೆಲವು ಕೆಲಸಗಳನ್ನು ಸರ್ಕಾರ ಮಾಡುವುದಕ್ಕೆ ಹೊರಟಿದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಚುನಾಯಿಸುವುದಕ್ಕೆ ಸರ್ಕಾರದವರು ನಿರ್ದೇಶನ ಕೊಟ್ಟು ಅವರ ಪಕ್ಷದವರೇ ಗೆಲ್ಲುವಂಥ ರೀತಿಯಲ್ಲಿ ಎಲೆಕ್ಟೋರಲ್ ರೋಲ್‌ನ್ನು ತಯಾರು ಮಾಡಿಕೊಂಡಿರುವುದು ನಮಗೆ ತಿಳಿದುಬಂದಿದೆ. ವಿಧಾನ ಪರಿಷತ್‌ನ ಸದಸ್ಯರು ಅವರವರ ಮತಕ್ಷೇತ್ರಗಳನ್ನು ಅವರವರೇ ಆಯ್ಕೆ ಮಾಡಿಕೊಳ್ಳುವುದಕ್ಕೆ ಇವರು ಚಾಯ್ಸ್ ಕೊಟ್ಟಿದ್ದಾರೆ. ಅವರು ಎಲ್ಲಿ ಬೇಕಾದರೂ ಮತ ನೀಡಬಹುದು. ಅದೇ ರೀತಿ ರಾಜ್ಯಸಭಾ ಸದಸ್ಯರೂ ಏತಕ್ಕೆ ಮಾಡಬಾರದೆಂದು ನಾನು ಕೇಳಬಯಸುತ್ತೇನೆ. ಪದವೀಧರರ ಕ್ಷೇತ್ರದಿಂದ ಗೆದ್ದಿರುವವರು ರಾಜ್ಯದಲ್ಲಿ ಎಲ್ಲಿ ಬೇಕಾದರೂ ಮತ ನೀಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಇದೇ ಅನುಕೂಲವನ್ನು ಉಪಾಧ್ಯಾಯರ ಕ್ಷೇತ್ರದವರಿಗೂ ಕೊಟ್ಟಿದ್ದೀರಿ. ಆದರೆ ಮುನಿಸಿಪಲ್ ಲಿಮಿಟ್‌ನಲ್ಲಿ ವಾಸ ಆಗಿದ್ದರೆ ಅವರಿಗೆ ಮತ ನೀಡುವ ಅಧಿಕಾರವಿಲ್ಲವೆಂದು ತಿಳಿಸಿದ್ದೀರಿ. ಉಪಾಧ್ಯಾಯರ ಕ್ಷೇತ್ರ ಮತ್ತು ಪದವೀಧರರ ಕ್ಷೇತ್ರದಿಂದ ಆರಿಸಿ ಬಂದಿರುವವರಿಗೆ ಯಾವರೀತಿ ಮತ ನೀಡುವುದಕ್ಕೆ ಅವಕಾಶ ಇದೆಯೋ ಅದೇ ರೀತಿ ರಾಜ್ಯಸಭಾ ಸದಸ್ಯರಿಗೂ ಮತ ನೀಡಲು ಅವಕಾಶ ಇರಬೇಕೆಂದು ನಾನು ಹೇಳಬಯಸುತ್ತೇನೆ. ಮಾನ್ಯ ಸದಸ್ಯರಾದ ಮಾದೇಗೌಡರು

ಈ ಚುನಾವಣಾ ಪಟ್ಟಿಯನ್ನು ಕೊಡುವಂತೆ ಡಿವಿಜನಲ್ ಕಮಿಷನರ್‌ರವರನ್ನು ಕೇಳಿದಾಗ ಚೀಫ್ ಎಲೆಕ್ಟೋರಲ್ ಆಫೀಸರ್ ಹೇಳಿದರೆ ಕೊಡುತ್ತೇನೆಂದು ಹೇಳಿದರಂತೆ. ಇದೊಂದು ವಿಚಿತ್ರ ಸಂಗತಿ. ಇದನ್ನು ನೋಡಿದರೆ ಪ್ರಜಾಪ್ರಭುತ್ವದ ಮೊಗಲನೇ ಹಂತಕ್ಕೇ ಕೊಡಲಿ ಪೆಟ್ಟು ಬಿದ್ದಂತಾಗಿದೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ (ಗುರುಮಿಟ್ಕಲ್).—ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ ನಮ್ಮ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಪ್ರಜಾಪ್ರಭುತ್ವವನ್ನು ಒಳಗೊಂಡು ಅದರಲ್ಲೂ ವಿಶೇಷವಾಗಿ ಹಳ್ಳಿಯ ಜನರಿಗೆ ಈ ಪ್ರಜಾಪ್ರಭುತ್ವವನ್ನು ಮುಟ್ಟಿಸುತ್ತೇವೆಂದು ಹೇಳಿ, ಮೊನ್ನೆ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳು ನಮ್ಮ ರಾಜ್ಯದಲ್ಲಿ ನಡೆದವು. ನಡೆದ ನಂತರ ಈಗ ಎರಡನೆಯ ಹಂತ ಪ್ರಾರಂಭವಾಗಿದೆ. ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ, ಮತ್ತು ಮಂಡಲ್ ಪಂಚಾಯತ್ ಪ್ರಧಾನ ಮತ್ತು ಉಪ ಪ್ರಧಾನರುಗಳು ಕೂಡ ಆಯ್ಕೆಯಾಗಬೇಕಾಗಿದೆ. ಇದಕ್ಕಾಗಿ ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್‌ರವರಿಗೆ ಸರ್ಕಾರದ ಆದೇಶ ಹೋದ ಮೇಲೆ ಜಿಲ್ಲಾ ಪರಿಷತ್ತಿನಲ್ಲಿ ಯಾರು ಯಾರು ಮತದಾರರು ಇರಬೇಕು ಎನ್ನುವುದನ್ನು ಇವರಿಂದ ಇಂಟರ್‌ಪ್ರಿಟೇಷನ್ ಹೋದ ಮೇಲೆ ಅವರು ಇವೊತ್ತು ಒಂದು ಮಾಡಿದ್ದಾರೆ, ಈ ವೋಟರ್ ಲಿಸ್ಟನ್ನು ತಯಾರು ವೋಟರ್ ಲಿಸ್ಟನ್ನು ತಯಾರು ಮಾಡುವಾಗ ಕೆಲವು ಜಿಲ್ಲೆಯಲ್ಲಿ ಅವರಿಗೆ ಎಲ್ಲಿ ಅನುಕೂಲವಾಗುತ್ತದೆಯೋ ಆ ರೀತಿಯಲ್ಲಿ ಮಾಡಿಕೊಂಡಿರುತ್ತಾರೆ. ಕೆಲವು ಜಿಲ್ಲೆಗಳಲ್ಲಿ ಎಲ್ಲಿ ಅನಾನುಕೂಲವಾಗುತ್ತದೆಯೋ ಅಲ್ಲಿ ಬೇರೆ ರೀತಿಯಲ್ಲಿ ಮಾಡಿದ್ದಾರೆ. ಜಿಲ್ಲಾ ಪರಿಷತ್ ಸೆಕ್ಷನ್ ೩ನ್ನು ತಮ್ಮ ತಮ್ಮ ಇಚ್ಛಾನುಸಾರವಾಗಿ ಇಂಟರ್‌ಪ್ರಿಟ್ ಮಾಡಿ ಕೆಲವು ವೋಟರ್ಸ್‌ನ್ನು ಇನ್‌ಕ್ಲೂಡ್ ಮಾಡಿಸಿದ್ದಾರೆ. ಅದರಲ್ಲೂ ವಿಶೇಷವಾಗಿ ವೋಟರ್ಸ್ ಲಿಸ್ಟ್‌ನಲ್ಲಿ ಹೆಸರುಗಳನ್ನು ಸೇರಿಸುವಾಗ ಎಂ.ಎಲ್.ಸಿ. ಮತ್ತು ರಾಜ್ಯ ಸಭಾ ಮೆಂಬರ್ಸ್‌ಗಳು ಏನು ಇದ್ದಾರೆ ಅವರುಗಳನ್ನು ಕೈಬಿಟ್ಟಿದ್ದಾರೆ. ಕೆಲವು ಕಡೆ ಅದನ್ನು ಹೇಳತಕ್ಕಂಥ ಉದ್ದೇಶ ಇಷ್ಟೇ. ನಾವು ಹೇಳಿದ ಹಾಗೆ ಕೇಳಬೇಕು ಎನ್ನುವ ರೀತಿಯಲ್ಲಿ ಅಲ್ಲೂ ಕೂಡ ನಮ್ಮವರೇ ಅಧ್ಯಕ್ಷರಾಗಬೇಕು, ಉಪಾಧ್ಯಕ್ಷರಾಗಬೇಕು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ವೋಟರ್ಸ್ ಲಿಸ್ಟ್ ಮಾಡಿದ್ದಾರೆ. ಇದು ಯಾವ ಫೇರ್ ಎಲೆಕ್ಷನ್ ಎನ್ನುವುದು ಗೊತ್ತಾಗಲಿಲ್ಲ. ಮೊನ್ನೆ ತಾನೆ ರಾಜ್ಯಪಾಲರ ಭಾಷಣದಲ್ಲಿ ನಾವು ಬಹಳ ಫೇರ್ ಎಲೆಕ್ಷನ್ ಕಂಡಕ್ಟ್ ಮಾಡಿ ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದೇವೆ. ಐತಿಹಾಸಿಕ ಚುನಾವಣೆಯನ್ನು ನಾವು ನಡೆಸಿದ್ದೇವೆಂದು ಹೇಳಿ ಬಹುಶಃ ಇನ್ನೆಲ್ಲೂ ಕೂಡ ಈ ರೀತಿ ಚುನಾವಣೆ ನಡೆದಿಲ್ಲ ಎನ್ನುವ ಮಾತನ್ನು ಮಾತನ್ನು ಮುಖ್ಯಮಂತ್ರಿಗಳು ಹೇಳಿರುತ್ತಾರೆ. ಆದರೆ ಇವತ್ತು ವೋಟರ್ ಲಿಸ್ಟನ್ನು ನೋಡಿದಾಗ ನಮಗೆನಿಸುತ್ತದೆ ಖಂಡಿತವಾಗಿಯೂ ವಿರೋಧಪಕ್ಷವನ್ನು ತುಳಿಯಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದಾರೋ ಅಥವಾ ತಮಗೆ ಬೇಕಾದವರನ್ನು ಚುನಾಯಿಸುವುದಕ್ಕೋಸ್ಕರವಾಗಿ ಮಾಡಿದ್ದಾರೋ ಎಂದು ನನಗೆ ಅರ್ಥವಾಗುತ್ತಿಲ್ಲ. ಇವೊತ್ತು ತಮಗೆ ಒಂದೇ ಒಂದು ಉದಾಹರಣೆಯನ್ನು ಹೇಳುವುದಾದರೆ ಶ್ರೀಮಾನ್ ಗುಂಡಯ್ಯ ಶೆಟ್ಟರು ಗ್ರಾಜುಯೇಟ್ಸ್ ಕಾನ್ಸ್‌ಸ್ಟಿಯನ್ಸಿ ಗುಲ್ಬರ್ಗಾ ಮತ್ತು ಬೆಂಗಳೂರು ಜಾಯಿಂಟ್ ಕಾನ್‌ಸ್ಟಿಟುಯನ್ಸಿ ಇದ್ದಾಗ ಗುಲ್ಬರ್ಗಾ ಮತ್ತು ಬೆಂಗಳೂರು ಇದ್ದಾಗ ಎಲೆಕ್ಷನ್ ಆಯಿತು. ಅವರ ರೆಸಿಡೆನ್ಸಿ ಬೆಂಗಳೂರು ಅವರಿಗೆ ಮತದಾನದ ಹಕ್ಕು ಗುಲ್ಬರ್ಗಾ, ಬೀದರ್, ರಾಯಚೂರು ಮತ್ತು ಬಳ್ಳಾರಿ ಈ ನಾಲ್ಕು ಜಿಲ್ಲೆಗಳಲ್ಲೂ ಕೊಟ್ಟಿದ್ದಾರೆ. ಇನೊಂದು ಕಡೆ ಅಲ್ಲಿಯೇ ವಾಸವಾಗಿರತಕ್ಕಂಥವರು ಮಾನ್ಯ ಕಲ್ಮಾಣ್‌ಕರ್‌ರವರಿಗೆ ಈ ಮತದಾನದ ಹಕ್ಕಿಲ್ಲ. ಈ ರೀತಿ ಒಂದು ಇಂಟರ್‌ಪ್ರಿಟೇಷನ್ ಅಲ್ಲ. ಇನ್ನೊಂದು ಕಡೆ ಎಂ.ಎಲ್.ಸಿ. ಯವರ ಜ್ಯೂರಿಡಿಕ್ಷನ್ ಇಡೀ ರಾಜ್ಯದಲ್ಲಿ ಬರುತ್ತದೆ. ಈ ಸದನದಲ್ಲಿರತಕ್ಕಂಥ ೨೦–೨೭ ಜನ ಈ ರೀತಿ ಮತ ನೀಡಿದ್ದಾರೆ. ಅವರೇನು ನಾಮಿನೇಟ್ ಅಲ್ಲ. ನಾವು ಯಾವ ರೀತಿಯಾಗಿ ಪಾರ್ಲಿಮೆಂಟ್ ಮೆಂಬರ್ಸ್‌ಗೆ ಕೊಡುತ್ತೇವೆ ಆ ಹಕ್ಕನ್ನು ಇವತ್ತು ಇಂಟರ್‌ಪ್ರಿಟೇಷನ್ ಮಾಡಿ ಮೊಟಕುಗೊಳಿಸಿದ್ದಾರೆ, ತೆಗೆದು ಹಾಕಿದ್ದಾರೆ. ಅದೇ ರೀತಿ ಇನ್ನೊಂದು ಉದಾಹರಣೆ ಕೊಡುತ್ತೇನೆ. ವಿದ್ಯಾ ಸಚಿವರಾದ ಮಂಜುನಾಥ್‌ರವರು ಏನಿದ್ದಾರೆ ಅವರ ವಿಳಾಸ ೩ ಕಡೆ ಇದೆ. ಬೆಂಗಳೂರು, ಚಿತ್ರದುರ್ಗ ಮತ್ತು ಇನ್ನೊಂದು ಯಾವುದೋ ಹಳ್ಳಿಯಲ್ಲಿ ಇದೆ. ಮೊದಲು ವೋಟರ್ ಲಿಸ್ಟ್‌ನಲ್ಲಿ ಅವರ ಹೆಸರು ಇರಲಿಲ್ಲ. ನಾಳೆಯ ದಿವಸ ತಾಪತ್ರಯ ಬರುತ್ತದೆಂದು ಅವರನ್ನು ಆರ್ಡಿನರಿ ರೆಸಿಡೆಂಟ್ ಎಂದು ತೋರಿಸಿ ಚಿತ್ರದುರ್ಗದ ಮತ ಪಟ್ಟಿಯಲ್ಲಿ ಅವರ ಹೆಸರನ್ನು ಸೇರಿಸಿದ್ದಾರೆ. ಇಂಥ ಒಂದಲ್ಲ ಹಲವಾರು ಉದಾಹರಣೆಗಳನ್ನು ನಾನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೊಡುತ್ತೇನೆ. ವೋಟರ್ ಲಿಸ್ಟ್ ಎಲ್ಲಾ ಇದೆ. ಈ ರೀತಿ ವೋಟರ್ ಲಿಸ್ಟ್ ಮಾಡಿ ಮೋಸ ಮಾಡಿದರೆ ಇದು ಖಂಡಿತವಾಗಿ ಪ್ರಜಾಪ್ರಭುತ್ವದ ಕೊಲೆ ಎಂದು ಸ್ಪಷ್ಟವಾಗಿ ನಾನು ಹೇಳಬೇಕಾಗುತ್ತದೆ. ಒಂದು ಹಕ್ಕನ್ನು ಕೊಡಬೇಕಾದರೆ ಎಲ್ಲಾ ಎಂ ಎಲ್.ಎ. ಎಂ.ಎಲ್.ಸಿ. ಹಾಗೂ ರಾಜ್ಯಸಭಾ ಸದಸ್ಯರುಗಳಿಗೆ ಒಂದು ಇಂಟರ್‌ಪ್ರಿಟೇಷನ್ ಕೊಡಬೇಕು. ಒಂದು ಕಡೆ ಒಬ್ಬರಿಗೆ ಕೊಡುತ್ತಿದ್ದೀರಿ, ಇನ್ನೊಂದು ಕಡೆ ಒಬ್ಬರಿಗೆ ಬರುವುದಿಲ್ಲವೆಂದು ಹೇಳುತ್ತೀರಿ. ಎಲ್ಲಿಯವರೆಗೆ ಮಾಡಿದ್ದೀರೆಂದರೆ, ಜಿಲ್ಲಾಧಿಕಾರಿಗಳಿಗೆ ಗಳಿಗೆ ಕೆಲವು ಕಡೆ ಸೂಚನೆಗಳನ್ನು ಕೊಟ್ಟು ಅವರಿಗೆ ನೋಟೀಸ್ ಕೂಡ ಹೋಗಿಲ್ಲ. ಆದರೆ ನೀವು ಎಲ್ಲಿ ವಾಸಿಸುತ್ತಿದ್ದೀರಿ, ಪ್ರಾಪರ್ ಅಡ್ರೆಸ್ ಕೊಡಿ ಎಂದು ಇವರಿಗೆ ಯಾರು ಬೇಕು ಅವರಿಗೆ ನೇರವಾಗಿ ಪತ್ರ ಕಳುಹಿಸಿ ಕನ್‌ಸೆಂಟ್ ತೆಗೆದುಕೊಂಡು ಆರ್ಡಿನರಿ ರೆಸಿಡೆಂಟ್ ಎಂದು ಮಾಡಿಕೊಂಡು ವೋಟರ್ ಲಿಸ್ಟ್‌ನಲ್ಲಿ ಸೇರಿಸಿ ವೋಟರ್ ಲಿಸ್ಟ್ ಪ್ರಿಪೇರ್ ಮಾಡಿದ್ದಾರೆ. ತಮ್ಮಲ್ಲಿ ಕಳಕಳಿಯ ಮನವಿ ಏನೆಂದರೆ ಈ ರೀತಿ ವ್ಯತ್ಯಾಸಗಳನ್ನು ಮಾಡಿ ತಮಗೆ ಬೇಕು ಬೇಕಾದವರ ಲಿಸ್ಟ್ ಮಾಡಿ ಪ್ರಜಾಪ್ರಭುತ್ವದ ಸಂಸ್ಥೆಗಳೇನಿವೆ ಅವಕ್ಕೆ ಭಾರೀ ಕೊಡಲಿಪೆಟ್ಟು ಹಾಕುತ್ತಿದ್ದೀರಿ. ಆದ್ದರಿಂದ ಇದನ್ನು ನಾವು ಅರ್ಜೆಂಟಾಗಿ ತಂದ ಉದ್ದೇಶ ಏನೆಂದರೆ ೧೬ ರಿಂದ ೨೧ ರವರೆಗೆ ಕೆಲವು ಚುನಾವಣೆಗಳು ಇವೆ. ಅಷ್ಟರಲ್ಲಿ ಎಲ್ಲಾ ಮುಗಿಯುತ್ತವೆ. ಅಷ್ಟರೊಳಗೆ ಸಂಪೂರ್ಣವಾಗಿ ಚರ್ಚೆಯಾಗಬೇಕು. ಯಾರ್‍ಯಾರು ಸದಸ್ಯರನ್ನು ವೋಟರ್ ಲಿಸ್ಟ್‌ನಲ್ಲಿ ಸೇರಿಲ್ಲ ಎಂಬ ಬಗ್ಗೆ ವಿವರ ಕೊಡುತ್ತೇವೆ. ದಯವಿಟ್ಟು ಈ ಬಗ್ಗೆ ಸಂಪೂರ್ಣವಾಗಿ ಚರ್ಚಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದು ಬಹಳ ಮಹತ್ವದ್ದು. ಚುನಾವಣೆ ತಾರೀಖನ್ನು ಈಗಾಗಲೇ ಪ್ರಕಟ ಮಾಡಲಾಗಿದೆ. ಮೋಷನ್ ಮೂವ್ ಮಾಡುವುದಕ್ಕೆ ೧೦–೧೨ ಎಂದು ಏನೋ ಟೈಂ ಕೊಡಲಾಗಿದೆ ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣೆ ಯಾವಾಗ ಆಗಬೇಕೆಂದು ಟೈಂ ನಿಗದಿ ಮಾಡಲಾಗಿದೆ. ಆದ್ದರಿಂದ ಇದು ಅರ್ಜೆಂಟ್ ಇದೆ, ಸಾರ್ವಜನಿಕರ ಹಿತದೃಷ್ಟಿಯಿಂದ ಇದು ಮಹತ್ವದ ವಿಷಯವಾಗಿದೆ. ಇದಕ್ಕೆ ತಾವು ಮನ್ನಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.(ಗದಗ್).—ಮಾನ್ಯ ಅಧ್ಯಕ್ಷರೇ, ನಾವು ಕಳುಹಿಸಿರುವ ಅಡ್ಜರ್ನ್‌ಮೆಂಟ್‌ಮೋಷನ್ ಸ್ಪಷ್ಟವಾಗಿ ಚಿತ್ರವನ್ನು ಸೃಷ್ಟೀಕರಿಸುತ್ತದೆ. ಇದು ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಂತ ಅವಶ್ಯವಾದ ಮತ್ತು ನಡೆಯುತಕ್ಕ ಅನ್ಯಾಯಕ್ಕೆ ಬೇರೆ ಯಾವುದೇ ಮಾರ್ಗವಿಲ್ಲದೆ ಈ ಸಭೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಇದನ್ನು ಎತ್ತುವುದು ಅತ್ಯಂತ ಅವಶ್ಯ ಇದೆ ಎಂದು ಈ ಸಭೆಯ ಎದುರಿಗೆ ಕೆಲವು ವಿಷಯಗಳನ್ನು ತರಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಇದು ತಮಗೆಲ್ಲಾ ಗೊತ್ತಿದೆ, ಮುಖ್ಯ ಮಂತ್ರಿಗಳಿಗೂ ಗೊತ್ತಿರಬೇಕು. ಮೊದಲು ಚುನಾವಣೆ ಕಾಲದಲ್ಲಿ ತಿಳಿದೋ ತಿಳಿಯದೆಯೋ ಅನೇಕ ಅನಾಹುತಗಳು ನಡೆದವು. ಒಂದೊಂದು ಊರಿನಲ್ಲಿ ಆ ಊರಿನ ಜನರು ಆರಿಸಿ ಬೇರೊಂದು ಮತದಾರರ ಕ್ಷೇತ್ರಕ್ಕೆ ಹೋಗಿ ಆ ಕ್ಷೇತ್ರವನ್ನೇ ಬದಲಾವಣೆ ಮಾಡಿ ಬೇರೆ ಮತದಾರರ ಕ್ಷೇತ್ರಕ್ಕೆ ಹಳ್ಳಿಗಳನ್ನು ತಂದು ಅಲ್ಲಿ ಹರಿಜನ ಅಥವಾ ಮಹಿಳಾ ಕ್ಷೇತ್ರಗಳು ಎಂದು ಮಾಡಿದರು.

ಅಧ್ಯಕ್ಷರು.—ಈಗ ನಾವು ಅಡ್ಜರ್ನ್‌ಮೆಂಟ್‌ಮೋಷನ್ ಬಗ್ಗೆ ಮಾತ್ರ ಹೇಳಿ.

ಶ್ರೀ ಕೆ.ಹೆಚ್. ಪಾಟೀಲ್.—ಹೀಗೆ ನಡೆದಿದೆ ಎಂದು ಹೇಳಿದೆ ಅದನ್ನು ಬಿಟ್ಟು ಬೇರೆ ಯಾವುದನ್ನೂ ಮಾತನಾಡುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ಇದು ಗೊತ್ತಿರಬೇಕು. ಅನೇಕ ಸಂದರ್ಭದಲ್ಲಿ ಎಷ್ಟು ಅನಾಹುತವಾಗುತ್ತದೆ ಎಂದರೆ ಕೆಲವು ಅಧಿಕಾರಿಗಳು ತಮಗೆ ಜ್ಯುರಿಸ್‌ಡಿಕ್ಷನ್ ಇಲ್ಲದಿದ್ದರೂ ಮತದಾನ ನಾಳೆ ಎನ್ನುವಾಗ ಪೋಲಿಂಗ್ ಭೂತನ್ನು ಬದಲಾವಣೆ ಮಾಡಿದ್ದಾರೆ, ಮಾನ್ಯ ಬೊಮ್ಮಾಯಿಯವರು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವುದರಲ್ಲಿ ಬಹಳ ತ್ವರಿತವಾಗಿರುತ್ತಾರೆ. ಆದರೆ ಈ ಬಗ್ಗೆ ಬರೆದ ಪತ್ರಕ್ಕೆ ಮಾತ್ರ ಇನ್ನೂ ಉತ್ತರ ಸಿಕ್ಕಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ಹೆಚ್ಚಿಗೆ ಕೆಲಸ ಇರಬಹುದು. ಆದರೆ ಬೊಮ್ಮಾಯಿಯವರು ಪತ್ರ ಬರೆಯಬಹುದಿತ್ತು. ಇದು ನೇರವಾಗಿ ಅವರ ಖಾತೆಗೆ ಸಂಬಂಧಪಟ್ಟಿದೆ. ನಾವು ಪ್ರಾಮಾಣಿಕವಾಗಿ ಆಡಳಿತ ನಡೆಸುತ್ತೇವೆ, ಮೌಲ್ಯಾಧಾರಿತ ರಾಜಕಾರಣವನ್ನು ಮಾಡುತ್ತೇವೆಂದು ಹಗಲಿರುಳೂ ಹೇಳುತ್ತಿರುತ್ತಾರೆ. ದುರ್ದೈವ, ನಿಮ್ಮ ಕೆಳಗಿರತಕ್ಕ ಅಧಿಕಾರಿ ಪೋಲಿಂಗ್ ಭೂತನ್ನು ತನಗೆ ಅಧಿಕಾರ ಇಲ್ಲದಿದ್ದರೂ ಬದಲಾವಣೆ ಮಾಡಿದ್ದನೆ, ಇವರ ಬಗ್ಗೆ ಏನು ಕ್ರಮ ತಗೆದುಕೊಳ್ಳುತ್ತೀರಿ ಎಂದು ಬರೆದಿದ್ದೆ ಅದಕ್ಕೆ ಉತ್ತರ ಇಲ್ಲ.

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ಏನೋ ಹೇಳುತ್ತಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.-ತಾವು ಬರೆದಂಥ ಪತ್ರವನ್ನು ಚೀಫ್ ಎಲೆಕ್ಟೋರಲ್ ಆಫೀಸರ್ ಅವರಿಗೆ ಅಂದೇ ಕಳುಹಿಸಿಕೊಟ್ಟಿದ್ದೇನೆ ವಿಚಾರಣೆ ಮಾಡಿ ಆಕ್ಷನ್ ತೆಗೆದುಕೊಳ್ಳಿ ಎಂದು. ಚುನಾವಣೆ ಇರುವುದರಿಂದ, ನಾಳೆ ಕೋರ್ಟು ಕಛೇರಿಗೆ ಹೋಗಬಹುದು ಎಂಬ ದೃಷ್ಟಿಯಿಂದ ನಿಮಗೆ ಉತ್ತರ ಕೊಟ್ಟಿಲ್ಲ. ನಾನು ತಕ್ಷಣ ಚುನಾವಣಾಧಿಕಾರಿಗಳಿಗೆ ಬರೆದಿದ್ದೇನೆ. ಚುನಾವಣಾ ವಿಚಾರದಲ್ಲಿ ನಿಮಗೆ ಉತ್ತರ ಕೊಡುವುದು ಸೂಕ್ತವೋ ಅಲ್ಲವೋ ಎಂದು ಪತ್ರ ಬರೆದಿಲ್ಲ. ನಾನು ಆವತ್ತೇ ಕ್ರಮ ತೆಗೆದುಕೊಂಡಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಬಹಳ ಸಂತೋಷ. ಚುನಾವಣಾಧಿಕಾರಿಗಳು ಏನು ಮಾಡುವುದಿದೆ ಜ್ಯುರಿಸ್‌ಡಿಕ್ಷನ್ ಇಲ್ಲದೆ ಮಾಡಿದ ವಿಚಾರ ನಿಮ್ಮ ಕಡೆ ಇದೆ. ಹೀಗಿರುವಾಗ ಅವರನ್ನು ಸಸ್ಪೆಂಡ್ ಮಾಡಬೇಕಾಗಿತ್ತು. ಚುನಾವಣಾಧಿಕಾರಿ ಅಂದರೆ ಯಾರು ? ಇವರು ನೇಮಿಸಿದ ಅಧಿಕಾರಿಯೇ ಅವರು. ಅವರೇನು ಇಂಡಿಪೆಂಡೆಂಟ್ ಬಾಡಿಯೇ ? ಇಂ ಪೀಚ್ ಮಾಡುವಹಾಗಿದೆಯೇ ? ಇವರ ಮಾತು ಕೇಳದಿದ್ದರೆ ಡೆಪ್ಯುಟಿ ಕಮೀಷನರ್ ಆಗಿ ಅಥವಾ ಡಿವಿಷನಲ್ ಕಮೀಷನರ್ ಆಗಿ ಹಾಕುತ್ತಾರೆ ಎಂದು ಪಾಪ ಅವರು ಹೇಳಿದ ಹಾಗೆ ಕೇಳುತ್ತಾರೆ. ನಾನು ಅವರ ಗಮನಕ್ಕೂ ತಂದಿದ್ದೇನೆ. ಆದರೆ ತಮ್ಮ ಚುನಾವಣಾಧಿಕಾರಿಗಳು ತಮ್ಮ ನಿಸ್ಸಹಾಯಕತೆಯನ್ನು ವ್ಯಕ್ತಮಾಡಿದ್ದಾರೆಂದು ವಿಷಾದದಿಂದ ಹೇಳಬೇಕಾಗಿದೆ. ಅದೇ ದೃಷ್ಟಿಕೋನದಿಂದ ಇವತ್ತಿನ ದಿವಸ ಇದೆಲ್ಲಾ ನಡೆದಿದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ನಾಗರತ್ನಮ್ಮನವರು ಹೇಳಿದರು. ಮತದಾರರ ಯಾದಿಯನ್ನು ತಯಾರು ಮಾಡುವಾಗ ತಮಗೆ ಅನುಕೂಲವಾಗುವಂತ ದೃಷ್ಟಿಯಲ್ಲಿ ಹೆಸರು ಸೇರಿಸಿ ತಮಗೆ ವಿರೋಧವಾಗಿರುವ ಜನರನ್ನು ಯಾವುದೋ ಸಂದರ್ಭದಲ್ಲಿ ಕೈಬಿಡುವ ಕೆಲಸ ನಡೆದಿದೆ. ಇದರಿಂದ ಏನು ಮಹಾ ಸಾಧಿಸಬೇಕಾಗಿದೆ ? ಮೂರು ನಾಲ್ಕರಲ್ಲಿ ವಿರೋಧಪಕ್ಷಗಳವರು ಬಂದಿದ್ದಾರೆ ಉಳಿದೆಲ್ಲಾ ಕಡೆ ನೀವು ಬಂದಿದ್ದೀರಿ. ಅಂಥದರಲ್ಲಿ ನಾಲ್ಕು ಕಡೆ ಕೂಡ ಇರಬಾರದು ಎಂದರೆ ಪ್ರಜಾಪ್ರಭುತ್ವ ಮೂಲೆಗುಂಪಾಗುವುದಿಲ್ಲವೇ ? ಮಾನ್ಯ ರಾಮಕೃಷ್ಣ ಹೆಗಡೆಯವರು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ದೇಶದಲ್ಲೆಲ್ಲಾ ಮೌಲ್ಯಾಧಾರಿತ ರಾಜಕಾರಣವನ್ನು ಹೇಳುವುದಕ್ಕೆ ಹೊರಟಿದ್ದಾರೆ. ಅಂಥವರು ಈ ಅವ್ಯವಹಾರವನ್ನು ನೋಡಿ ಮನಗಂಡು ಸುಮ್ಮನಿದ್ದರೆ ಇದಕ್ಕೆ ಏನು ಹೇಳಬೇಕು ಎಂದು ತಿಳಿಯದಾಗಿದೆ. ಮಾನ್ಯ ಸಭಾಧ್ಯಕ್ಷರೆ ಚುನಾವಣೆ ಗಿಟ್ಟಿಕ್ಕಿದೆ. ಈಗ ಕೆಲವು ವದಂತಿಗಳು ಇವೆ. ಅಧ್ಯಕ್ಷರನ್ನು ನಾಮಕರಣ ಮಾಡುತ್ತಿದ್ದಾರೆಂದು ವದಂತಿ ಇದೆ. ನಾಮಕರಣ ಮಾಡಬೇಕಾದರೆ ಆಕ್ಟ್ ಪ್ರಕಾರ ಎಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಪ್ರಾತಿನಿಧ್ಯ ಇಲ್ಲ ಅಲ್ಲಿ ಮಾಡಬೇಕೆಂದು ಕಾನೂನಿದೆ. ದುರ್ದೈವದಿಂದಲೋ ಸುದೈವದಿಂದಲೋ ಕರ್ನಾಟಕ ರಾಜ್ಯದಲ್ಲಿ ಹೆಗ್ಗಡೆಯವರ ಜಾತಿಯವರು ಬಿಟ್ಟರೆ ಉಳಿದವರೆಲ್ಲಾ ಬ್ಯಾಕ್‌ವರ್ಡ್‌ಕ್ಲಾಸ್ ಆಗಿದ್ದಾರೆ. ಮಾನ್ಯ ಹೆಗ್ಗಡೆಯವರು ಕೂಡ ಮೊನ್ನೆ ಒಕ್ಕಲಿಗ ಎಂದು ಹೇಳಿಕೊಂಡಿದ್ದಾರೆ. ಆದ್ದರಿಂದ ಎಲ್ಲರೂ ಕೂಡ ಬ್ಯಾಕ್‌ವರ್ಡ್‌ಕ್ಲಾಸ್ ಆಗಿರುವಾಗ ಬ್ಯಾಕ್‌ವರ್ಡ್ ಕ್ಲಾಸನ್ನು ನಾಮಕರಣ ಮಾಡುವ ಪ್ರಮೇಯ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಲೇ ಅವರಿಗೆ ಅಡ್ವಾಂಟೇಜ್ ಇದೆ. ಇವರನ್ನು ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಸೇರಿಸಿದರೆ ಹೇಗೆ ?

ಶ್ರೀ ಕೆ.ಹೆಚ್. ಪಾಟೀಲ್.—ನಾಮಕರಣದ ವಿಷಯದಲ್ಲಿ ಉಹಾಪೋಹವನ್ನು ಜನರಲ್ಲಿ ಇವರು ಎಬ್ಬಿಸಿದ್ದಾರೆ. ನಾವು ಮಾಡುವುದಿಲ್ಲ ಎಂದು ಹೆಗ್ಗಡೆಯವರು ಹೇಳುತ್ತಾರೆ. ಆದರೆ ಊಹಾಪೋಹ ವಿತಕ್ಕೆ ಎಳಿಸಿದ್ದಾರೆ ಎಂದರೆ ಎರಡು ದಂಡೆ ಮೇಲೆ ಕುಳಿತ ಜನರನ್ನು ನಾಮಕರಣ ಮಾಡುತ್ತೇವೆಂದು ವೋಟು ಹಾಕಿಸಿಕೊಳ್ಳುವುದಕ್ಕೆ, ಇನ್‌ಡೈರೆಕ್ಟಾಗಿ ಕ್ಯಾನ್‌ವಾಸ್ ಮಾಡುವ ಸಲುವಾಗಿ ಗೌರ್ನಮೆಂಟ್‌ಗೆ ಅನ್‌ಡ್ಯೂ ಅಡ್ವಾಂಟೇಜ್ ತೆಗೆದುಕೊಳ್ಳುವ ಸಲುವಾಗಿ ಈ ರೀತಿ ಅಪಪ್ರಚಾರ ನಡೆಸಿದ್ದಾರೆ. ಈ ಭಾಗದ ಅನೇಕ ಸದಸ್ಯರು ಈ ರೀತಿಯ ಶಂಕೆಯನ್ನು ವ್ಯಕ್ತ ಮಾಡಿದ್ದಾರೆ. ಇವತ್ತು ನಾಮಕರಣ ಮಾಡದೇ ಇದ್ದರೂ ಈ ಸದನ ಮುಗಿದ ಮೇಲೆ ಆರ್ಡಿನೆನ್ಸ್ ಮುಖಾಂತರವೋ ಬೇರೆ ಮೂಲಕವೋ ತಂದು ಆರ್ಟಿಸಾನ್ಸ್ ಮತ್ತೊಂದು ಎಂದು ಹೆಸರು ಹೇಳಿ ನಾಮಕರಣ ಮಾಡುತ್ತಾರೆ. ತಮ್ಮ ವೋಟಿನ ಸಂಖ್ಯೆ ಹೆಚ್ಚು ಮಾಡುವ ಸಲುವಾಗಿ ಈ ರೀತಿ ಯೋಜನೆ ಹಾಕಿದ್ದಾರೆಂದು ಹೇಳಿದ್ದಾರೆ. ಈ ಎಲ್ಲಾ ದೃಷ್ಟಿಯಿಂದ ಕಾನೂನನ್ನು ಮುರಿದಿದ್ದಾರೆ. ನಿಯಮಗಳು ಗಾಳಿ ಪಾಲಾಗಿವೆ. ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ ಒಬ್ಬ ಶಾಸಕ ಬರೆದಪತ್ರಕ್ಕೆ ಉತ್ತರ ಕೊಡಲಾರದಷ್ಟು ಈ ವಿಚಾರವನ್ನು ಗೋಪ್ಯವಾಗಿಟ್ಟಿದ್ದಾರೆ. ಅಂತಹ ಸಂದರ್ಭದಲ್ಲಿ ಕಾನೂನನ್ನು ಸರಿಯಾಗಿ ಪಾಲನೆ ಮಾಡುವ ಬಗ್ಗೆ ವಿಚಾರ ಮಾಡುವುದು ಈ ಸಭೆಯ ಮುಖ್ಯ ಕರ್ತವ್ಯ. ಆ ದೃಷ್ಟಿಯಿಂದ ಮಾನ್ಯ ಹೆಗಡೆಯವರು ಪ್ರಯತ್ನ ಮಾಡುತ್ತಾರೆ. ನಿಜವಾಗಿಯೂ ನಿಮಗೆ ತತ್ವದ ಆಧಾರದ ಮೇಲೆ ಪ್ರಜಾಪ್ರಭುತ್ವವನ್ನು ಉಳಿಸಬೇಕೆಂಬ ಇಚ್ಛೆ ಇದ್ದರೆ, ನಿಮಗೆ ನಿಜವಾಗಿಯೂ ಮೌಲ್ಯಾಧಾರಿತ

ರಾಜಕಾರಣವನ್ನು ಕೊನೆಯ ಪಕ್ಷ ಈ ಪ್ರಜಾಪ್ರಭುತ್ವದಲ್ಲಿ ಉಳಿಸಬೇಕೆಂಬ ಇಚ್ಛೆ ಇದ್ದರೆ ಇದರ ಬಗ್ಗೆ ವಿಚಾರಣೆಯನ್ನು ಮಾಡೋಣ. ವಿಚಾರಣೆಯಲ್ಲಿ ಯಾವುದು ಸರಿ ಕಾಣುತ್ತದೆ ಎಂಬುದರ ಬಗ್ಗೆ ನಮ್ಮೆಲ್ಲರ ಅಭಿಪ್ರಾಯವನ್ನು ತಿಳಿಕೊಂಡು ನಿಮಗೆ ಸರಿ ಕಂಡ ರೀತಿಯಲ್ಲಿ ನೀವು ಮಾಡಿರಿ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಅವರು ಇದಕ್ಕೆ ಇಲ್ಲ ಎಂದು ಹೇಳಲಿಕ್ಕಿಲ್ಲ ಎಂದು ನನ್ನ ಆಸೆಯಾಗಿದೆ. ಅನೇಕ ಸಂದರ್ಭದಲ್ಲಿ ನಿಲುವಳಿ ಸೂಚನೆಯ ಪರಿಣಾಮ ಏನೆಂದರೆ ಅದು ರಿಜೆಕ್ಟ್ ಮಾಡುವುದು. ಇಂತಥಹದ್ದಕ್ಕೂ ನೀವು ರಿಜೆಕ್ಟ್ ಮಾಡುವುದಾದರೆ, ಇನ್ನು ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನ್ಯಾವ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ತರಬಹುದು ಎನ್ನುವ ಸಂದೇಹ ಪ್ರಜಾಪ್ರಭುತ್ವದಲ್ಲಿ ಬರುತ್ತದೆ. ಅದಕ್ಕಾಗಿ ಇದನ್ನು ತಾವು ಕೂಲಂಕುಷವಾಗಿ ವಿಚಾರ ಮಾಡಿ. ಅವಶ್ಯಕತೆ ಬಿದ್ದರೆ, ಈ ಸದನದ ನಾಯಕರ ಜೊತೆ ಸಮಾಲೋಚನೆ ಮಾಡಿ. ಇದು ಬಹಳ ಮಹತ್ವದ ವಿಷಯ ಇದೆ. ಈ ವಿಷಯದ ಬಗ್ಗೆ ಸುದೀರ್ಘವಾದ ಚರ್ಚೆ ಎರಡೂ ಕಡೆಯಿಂದ ಆಗಲಿ. ಶ್ರೀಮತಿ ನಾಗರತ್ನಮ್ಮನವರು ವಿರೋಧ ಪಕ್ಷದ ನಾಯಕಿಯರಾದ ಮೇಲೆ ಇನ್ನು ಮೇಲೆ ಅವರ ಬಗ್ಗೆ ಬಹಳ ಸೌಜನ್ಯ ಯುತವಾಗಿ ವರ್ತನೆ ಮಾಡುವುದರ ಜೊತೆಗೆ ನಿಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತೇನೆಂದು ಹೇಳಿದ್ದಾರೆ. ಬಹಳ ಸಂತೋಷ. ಆ ರೀತಿಯ ವಿಶ್ವಾಸ ಇಂತಹ ವಿಷದಲ್ಲಿ ಇಲ್ಲದಿದ್ದರೆ, ಇನ್ನೆಲ್ಲಿ ಬರುತ್ತದೆ ? ಆ ದೃಷ್ಟಿಯಿಂದ ತಾವು ಪುನಃ ವಿಚಾರ ಮಾಡಿ, ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಂಡುವುದು ಹೆಚ್ಚು ಸೂಕ್ತ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಮಾದೇಗೌಡ (ಕಿರುಗಾವಲು). — ಮಾನ್ಯ ಸಭಾಧ್ಯಕ್ಷರೆ, ನಾವು ನಿಲುವಳಿ ಸೂಚನೆಯನ್ನು ಏನು ಕೊಟ್ಟಿದ್ದೇವೆ ಇದು ಬಹಳ ಗಂಭೀರವಾದ ವಿಷಯ ಎನ್ನತಕ್ಕಂತಹದ್ದನ್ನು ಮಾನ್ಯ ಮುಖ್ಯಮಂತ್ರಿಗಳೂ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ಜಿಲ್ಲಾಪರಿಷತ್ತು ಹಾಗೂ ಮಂಡಲ್ ಪಂಚಾಯಿತಿ ಚುನಾವಣೆಗಳು ಯಾವ ರೀತಿ ನಡೆದವು ಎಂಬುದು ಈ ದೇಶದ ೪ ಕೋಟಿ ಜನತೆಗೆ ಕೂಡ ಗೊತ್ತಿದೆ. ಆ ವಿಷಯವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಆ ಬಗ್ಗೆ ಬೇರೆ ಸಂದರ್ಭ ಬಂದಾಗ ಪ್ರಸ್ತಾಪ ಮಾಡುತ್ತೇನೆ. ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆಯನ್ನು ಮಂಡ್ಯ ಜಿಲ್ಲೆಯಲ್ಲಿ ೨೨ನೇ ತಾರೀಖು ನಡೆಸಬೇಕೆಂದು ಹೇಳಿದ್ದಾರೆ. ಜಿಲ್ಲಾ ಪರಿಷತ್ತು ಹಾಗೂ ಮಂಡಲ್ ಪಂಚಾಯಿತಿ ಆಕ್ಟ್‌ನ ೧೪೯ನೇ ಸೆಕ್ಷನ್‌ನಲ್ಲಿ ಯಾರು ಯಾರು ಓಟುಗಾರರು ಆಗಬೇಕು ಎಂಬುದು ಪ್ರಸ್ತಾಪ ಆಗಿದೆ. ಓಟುಗಾರರು ಯಾರು ಯಾರು ಎಂದರೆ, ಲೋಕಸಭಾ ಸದಸ್ಯರು, ಶಾಸನ ಸಭೆ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು, ಇವರುಗಳು ಓಟುದಾರರು ಎನ್ನತಕ್ಕಂತಹ ಪ್ರಸ್ತಾಪ ಸೆಕ್ಷನ್ ೧೪೯ರಲ್ಲಿ ಆಗಿದೆ. ಆದರೆ ನಮ್ಮ ಜಿಲ್ಲೆಯವರು ೪ ಜನ ವಿಧಾನ ಪರಿಷತ್ತಿನ ಸದಸ್ಯರು ಇದ್ದಾರೆ. ಆ ಸದಸ್ಯರ ಹೆಸರನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ೧೦–೧೧ ದಿವಸಗಳಲ್ಲಿ ಚುನಾವಣೆ ನಡೆಯಬೇಕಾಗಿದೆ. ವಿಧಾನ ಪರಿಷತ್ತಿನ ಸದಸ್ಯರೂ ಓಟುದಾರರೇ ಎಂಬುದು ಗೊತ್ತಿಲ್ಲ. ಓಟುದಾರರ ಪಟ್ಟಿಯನ್ನೇ ಬಹಳ ಗೋಪ್ಯವಾಗಿ ಇಟ್ಟುಕೊಂಡಿದ್ದಾರೆ. ಆ ಬಗ್ಗೆ ನಾನು ನಮ್ಮ ವಿಭಾಗಾಧಿಕಾರಿಗಳಿಗೆ ಕಾಗದ ಬರೆದು ೨೨ನೇ ತಾರೀಖು ನಡೆಯತಕ್ಕಂಥ ಜಿಲ್ಲಾಪರಿಷತ್ತಿನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ಓಟುದಾರರು ಯಾರು ಯಾರು ಆ ಬಗ್ಗೆ ಇರುವಂತಹ ಓಟುದಾವರ ಪಟ್ಟಿಯನ್ನು ಕೊಡಿ ಎಂಬುದಾಗಿ ಕಾಗದ ಬರೆದು ಕಳುಹಿಸಿದೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು.

ಶ್ರೀ ರಾಮಕೃಷ್ಣ ಹೆಗಡೆ. — ಕೇಳುತ್ತಿದ್ದೇನೆ.

ಶ್ರೀ ಜಿ. ಮಾದೇಗೌಡ, — ಐ. ಎ. ಎಸ್. ಅಧಿಕಾರಿಗಳು ಹೇಗೆ ಮಾಡುತ್ತಿದ್ದಾರೆಂಬುದನ್ನು ನಾನು ಹೇಳುತ್ತಿದ್ದೇನೆ. ನಿಮ್ಮ ಆಸೆ, ಗುರಿ ಏನಿದೆ ಎಂದರೆ, ಈ ರಾಜ್ಯ ರಾಮರಾಜ್ಯ ಆಗಬೇಕು, ಮೌಲ್ಯಾಧಾರಿತ ರಾಜಕಾರಣ ಮಾಡಬೇಕೆಂಬುದರ ಬಗ್ಗೆ ಬಹಳ ಆಸೆ ಇದೆ. ಸಂತೋಷ. ನಿಮ್ಮ ಆಸೆಯನ್ನು ನಾನು ಒಪ್ಪುತ್ತೇನೆ. ಆದರೆ ನಿಮ್ಮ ಅಧಿಕಾರಿಗಳು ನಿಮ್ಮ. ಆಸೆಯನ್ನು ಜನಗಳ ಹತ್ತಿರಕ್ಕೆ ಕೊಂಡೊಯ್ಯುತ್ತಾರೆಯೇ ಎಂಬುದರ ಬಗ್ಗೆ ತಾವು ಗಮನಿಸಬೇಕೆಂಬ ಉದ್ದೇಶದಿಂದ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಒಬ್ಬ ವಿಧಾನಸಭೆಯ ಸದಸ್ಯ ಒಬ್ಬ ಐ. ಎ. ಎಸ್. ಅಧಿಕಾರಿಯಾದ ಡಿವಿಜನಲ್ ಕಮೀಷನರ್‌ರಿಗೆ ಒಂದು ಓಟರ್ ಲಿಸ್ಟ್ ಕೊಡಿ ಎಂದು ಕೇಳಿದಾಗ,

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಾನು ವಿಧಾನಸೌಧದ ಕಾರ್ಯದರ್ಶಿಯವರನ್ನು ಫೋನ್ ಮೂಲಕ ಕೇಳಿ ನಿಮಗೆ ಓಟರ್ ಲಿಸ್ಟ್ ಕೊಡಬೇಕೇ ಬೇಡವೇ ಎಂದು ಕೇಳಿ ನಂತರ ಕೊಡುತ್ತೇನೆ ಎಂದರೆ ಈ ದೇಶದಲ್ಲಿ ಆಡಳಿತವನ್ನು ಯಾರು ಮಾಡುತ್ತಿದ್ದಾರೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಯವರು ಯೋಚನೆ ಮಾಡಬೇಕು.

೧-೦೦ ಪಿ. ಎಂ.

ಇವೊತ್ತು ಅಧಿಕಾರ ವಿಧಾನಸೌಧವಲ್ಲಿ ಇರಬಾರದು ಅದು ಜನರಲ್ಲಿ ಹೋಗಬೇಕೆಂದು ಏನು ಆಸೆಯನ್ನು ಇಟ್ಟುಕೊಳ್ಳಲಾಗಿದೆ ಆ ಬಗ್ಗೆ ನಿಮ್ಮ ಅಧಿಕಾರಿಗಳು ಎಷ್ಟು ಮಟ್ಟಿಗೆ ಅದನ್ನು ಜಾರಿಗೆ ತರುತ್ತಾರೆ ಎನ್ನುವ ವಿಚಾರವನ್ನು ಇಲ್ಲಿ ನೋಡಬೇಕು. ನಾನು ಅದಕ್ಕೆ ಅವರಿಗೆ ಹೇಳಿದೆ. ಇವತ್ತು ಓಟರ್ ಲಿಸ್ಟ್ ಒಂದು ಪಬ್ಲಿಕ್ ಡಾಕ್ಯುಮೆಂಟ್ ಇದ್ದಹಾಗೆ, ಜಿಲ್ಲಾಧಿಕಾರಿಗಳಾಗಿ, ತಾವು ಹೇಳತಕ್ಕ ಮಾತು ಇದಲ್ಲ ಎಂದು. It is a public document. Any ordinary citizen is entitled to obtain copies of the Voters list under the Rules. if there is any fees to be paid. I am prepared to pay it. Let him furnish the voters, list. ವಿಧಾನಸೌಧಕ್ಕೆ ಫೋನ್ ಮಾಡಿ ಇವರಿಗೆ ಕೊಡಬೇಕೇ ಬೇಡವೇ ಎಂದು ತಿಳಿದು ಕೊಡುತ್ತೇನೆಂದರೆ ಇದಕ್ಕಿಂತ ನಾಚಿಕೆಗೇಡಿನ ಪರಿಸ್ಥಿತಿ ಈ ದೇಶದಲ್ಲಿ ಇನ್ನೇನೂ ಇಲ್ಲ. ಜಿಲ್ಲಾಪರಿಷತ್ ಹಾಗೂ ಮಂಡಲ ಪಂಚಾಯಿತಿ ಚುನಾವಣೆಗಳು ನಡೆದವು. ಅವುಗಳಲ್ಲಿ ನಿಮ್ಮ ಅಧಿಕಾರಿಗಳೆಲ್ಲಾ ಕ್ಯಾನ್ವಾಸ್ ಮಾಡಿದರು. ಕಾನೂನು ಪ್ರಕಾರ ಚುನಾವಣೆಗಳು ಆಗಿಲ್ಲ ಎಂದು ನಾವು ಏನು ಹೇಳಿದ್ದೇವೋ ಅದಕ್ಕೆ ಇದು ಒಂದೇ ಸಾಕ್ಷಿ. ಇವತ್ತು ಓಟರ್ ಲಿಸ್ಟ್ ಇಲ್ಲದೇ ಚುನಾವಣೆಯನ್ನು ಹೇಗೆ ನಡೆಸುವುದು ? ಇವತ್ತು ನಮ್ಮ ಜಿಲ್ಲೆಯಿಂದ ೪ ಜನ ವಿಧಾನ ಪರಿಷತ್‌ನ ಸದಸ್ಯರಿಗೆ ಓಟು ಕೊಡತಕ್ಕ ಅಧಿಕಾರ ಬಂದರೆ ನಮ್ಮ ಜಿಲ್ಲೆಯಲ್ಲಿ ನಮ್ಮ ಪಕ್ಷದವರು ಅಧಿಕಾರವನ್ನು ಪಡೆದುಕೊಳ್ಳುವುದಕ್ಕೆ ಅವಕಾಶ ಇದೆ ಮಾನ್ಯ ಪಾಟೀಲರು ಹೇಳಿದಹಾಗೆ ಸೆಕ್ಷನ್ ೧೩೯ರ ಪ್ರಕಾರ ಕಾನೂನು ಬದ್ಧವಾಗಿ ನಮ್ಮ ಪಕ್ಷದವರು ೪-೫ ಕಡೆ ಅಧಿಕಾರಕ್ಕೆ ಬರುವುದಕ್ಕೆ ಅವಕಾಶ ಇದೆ. ೨೦ ಜಿಲ್ಲೆಗಳಲ್ಲೂ ನೀವೇ ಅಧಿಕಾರ ಮಾಡಬೇಕೇ ? ಎಲ್ಲೆಲ್ಲಿ ಯಾರು ಯಾರು ಓಟು ಮಾಡುವುದಕ್ಕೆ ಅವಕಾಶ ಇದೆ ಅದನ್ನು ಮೊಟಕು ಮಾಡುವುದು ಪ್ರಜಾಪ್ರಭುತ್ವಕ್ಕೆ ಶೋಭೆತರತಕ್ಕದ್ದು ಅಲ್ಲ. ಹೀಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುವುದಿದೆ. ಆದ್ದರಿಂದ ಅದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರೇ ಸ್ನೇಹಿತರು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಅದಕ್ಕೆ ಏನು ಉತ್ತರವನ್ನು ಕೊಡಬೇಕೋ ಅದನ್ನು ಸಂಬಂಧಪಟ್ಟ ಮಂತ್ರಿಗಳು ಕೊಡುತ್ತಾರೆ. ಆದರೆ ನನ್ನ ಆಕ್ಷೇಪ ಏನೆಂದರೆ, ಈ ವಿಚಾರವನ್ನು ನಿಲುವಳಿ ಸೂಚನೆ ರೂಪದಲ್ಲಿ ತರುವುದು ಸಾಧ್ಯವಿಲ್ಲ. ಇದರ ಒಕ್ಕಣಿಕೆಯನ್ನು ನೋಡಿ. ಮಾನ್ಯ ನಾಗರತ್ನಮ್ಮನವರು ಈ ಭಾಷೆ ಬಳಸುವುದಕ್ಕೆ ಪರವಾನಗಿ ಏಕೆ ಕೊಟ್ಟರೋ ನನಗೆ ಗೊತ್ತಿಲ್ಲ.

" ಮಂಡಲ ಪಂಚಾಯಿತಿ ನೇಮಕಾತಿಯನ್ನು ಮಾಡಲು ಸರ್ಕಾರ ಹೊರಟಿರುವ ಕಾನೂನು ಬಾಹಿರ ಮತ್ತು ಪ್ರಜಾಪ್ರಭುತ್ವ ನೀತಿಯ ಸಮಾಧಿ ಮಾಡಲು...... "

ಇದೆಲ್ಲಾ ಬೇಕೆಂದರೆ ಬರೆದುಕೊಳ್ಳಿ. ಶ್ರೀಮತಿ ನಾಗರತ್ನಮ್ಮನವರು ಬಹುಶಃ ಇದನ್ನು ನೋಡಿರಲಿಲ್ಲ ಎನಿಸುತ್ತದೆ.

" ...... ಮಾಡಲು ಹೊರಟ ಸರ್ಕಾರದ ನೀತಿಯನ್ನು ಚರ್ಚಿಸಲು ...... " ಎಂದು ಇದೆ. ಸರ್ಕಾರದ ನೀತಿಯನ್ನು ಚರ್ಚಿಸಲಿಕ್ಕೆ ನಿಲುವಳಿ ಸೂಚನೆಯನ್ನು ತರಲಿಕ್ಕೆ ಬರುವುದಿಲ್ಲ. ನಿಲುವಳಿ ಸೂಚನೆ ತರಬೇಕಾದರೆ ಅದಕ್ಕೆ ನಮ್ಮ ರೂಲ್ಸ್ ಪ್ರಕಾರ ಇಂತಹ ಒಂದು ಘಟನೆಯಾಗಿರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಸರಿಯಾಗಿ ಓದಿ. ತಾವು ಪ್ರಿಪೇರ್ ಮಾಡಿದ ವೋಟರ್ಸ್ ಲಿಸ್ಟನ್ನು ತಾವು ಕೊಟ್ಟಂತಹ ಆದೇಶದ ಮೇಲೆ. ತಮ್ಮ ಧೋರಣೆ ಏನಿದೆ ಅದರ ಮೇಲೆ ಚರ್ಚೆ ಆಗಬೇಕಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಮಾದೇಗೌಡರು ಒಂದು ಮಾತನ್ನು ಹೇಳಿದರು. ಡಿವಿಜನಲ್ ಕಮಿಷನರ್ ಹತ್ತಿರ ಹೋಗಿ ವೋಟರ್ಸ್ ಲಿಸ್ಟನ್ನು ಕೇಳಿದರೆ ಅವರು ಕೊಡಲಿಲ್ಲ. ಸೆಕ್ರೆಟರಿಯವರನ್ನು ಕೇಳಿ, ಅವರನ್ನು ಕೇಳಿ ಇವರನ್ನು ಕೇಳಿ ಎಂದು ಹೇಳುತ್ತಾರೆಂದು ಇದ್ದರೆ, ನೀತಿ

ಬಗ್ಗೆ ಚರ್ಚೆ ಮಾಡಲಿಕ್ಕೆ ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ. ಮಾನ್ಯ ಅಧ್ಯಕ್ಷರೆ ಇದನ್ನು ತಾವು ಕನ್ವರ್ಟ್ ಮಾಡುತ್ತೀರೋ ಅಥವಾ ಬೇರೆ ರೀತಿ ಉಪಯೋಗಿಸುತ್ತೀರೋ ಅದನ್ನು ಮಾಡಿ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ನಮ್ಮ ಸರ್ಕಾರ ಇರುವವರೆಗೂ ಪ್ರಜಾಪ್ರಭುತ್ವಕ್ಕೆ ತದ್ವಿರುದ್ಧವಾದ ಯಾವುದೇ ಕೆಲಸ ಮಾಡುವುದಿಲ್ಲ. ಅಷ್ಟೇ ಕೆಲಸವನ್ನು ವಿರೋಧಪಕ್ಷಗಳ ಸರ್ಕಾರಗಳನ್ನು ಕೆಡದಿರುವಂತಹ ಉದಾಹರಣೆಗಳನ್ನು ಕೊಡಲೇ ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದೇ ರಾತ್ರಿಯಲ್ಲಿ ನೀವು ೮ ಸರ್ಕಾರಗಳನ್ನು ಕೆಡವಿದ್ದೀರಿ.

ಶ್ರೀ ಜಿ. ಮಾದೇಗೌಡ.—ನಾನು ನಿರ್ಧಿಷ್ಟವಾದ ಆಪಾದನೆಯನ್ನು ಅಧಿಕಾರಿಗಳ ಮೇಲೆ ಮಾಡಿದ್ದೇನೆ,

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ವೇದಾಂತ ಹೆಮ್ಮಿಗೆ.—ಚುನಾಯಿತರಾದ ಸದಸ್ಯರನ್ನು ಬಚ್ಚಿಟ್ಟುಕೊಳ್ಳುವುದು ಪ್ರಜಾಪ್ರಭುತ್ವವೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀತಿ ಮತ್ತು ತತ್ವ ಇವೆರಡಕ್ಕೂ ಥಿನ್ ಲೈನ್ ಇದೆ. ಕನ್ನಡದಲ್ಲಿ ಪರಿಣತರಾದ ನೀವು ನೀತಿ ತತ್ವದ ಆಧಾರದ ಮೇಲೆ ಹೋಗಿ ತತ್ವವನ್ನೇ ಉಪಯೋಗಿಸಿಕೊಳ್ಳಿ. ನಿಮ್ಮ ಧೋರಣೆ ಏನಿದೆ, ಅದರಂತೆ ಎಲ್ಲಾ ಕಡೆ ವೋಟು ಮಾಡಬೇಕೆಂದು ಮಾನ್ಯ ಮಂತ್ರಿಗಳು ಹೇಳಿಲ್ಲವೇ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಮಾದೇಗೌಡರ ಪ್ರಶ್ನೆಗೆ ಸೂಕ್ಷ್ಮವಾಗಿ ಉತ್ತರ ಹೇಳುತ್ತೇನೆ. ವೋಟರ್ಸ್ ಲಿಸ್ಟನ್ನು ಕೇಳಿದರೆ ಕೊಡಲಿಲ್ಲ, ಆದರಿಂದ ಪ್ರಜಾಪ್ರಭುತ್ವದ ಕೊಲೆಯಾಗಿದೆ ಎಂದೂ ಇದು ಇವರ ತತ್ವವೆಂದು ಹೇಳಿದ್ದಾರೆ. ಇದರಲ್ಲಿ ವೋಟರ್ಸ್ ಲಿಸ್ಟ್ ಇಲ್ಲವೇ ಇಲ್ಲ. Voter's list is a technical word. Voters list means it should be published, Here, it is only a Meeting Notice. Technically the Divisional Commissioner is right, He has not given the Voter's list because there is no Voter's list. He has sent the Meeting Notices to those who are entitled to take part.

(INTERRUPTIONS)

SRI M. MALLIKARJUNA KHARGE.—I am sorry. They have supplied this Voter's list by taking three Rupees. In our District the Divisional Commissioner has furnished Voters list, If you are ignorant, you go through it. But please don t commit mistakes.

SRI ABDUL NAZIR SAB.—You are committing hundreds of mistakes.

(INTERRUPTIONS)

SRI ABDUL NAZIR SAB.—Why should you pay Rs. 3-you need not pay.

(INTERRUPTIONS)

ಶ್ರೀ ಅಬ್ದುಲ್ ನಜೀರ್‌ಸಾಬ್.—ಚುನಾಯಿತರಾದ ಪಟ್ಟಿಯನ್ನು ರಾಜ್ಯಪತ್ರದಲ್ಲಿ ಪ್ರಕಟ ಮಾಡಲಾಗಿದೆ.

ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಚುನಾವಣೆಗೆ ಸಂಬಂಧಿಸಿದಂತೆ, ಕಾನೂನು ಪ್ರಕಾರ ವೋಟರ್ಸ್ ಲಿಸ್ಟ್ ಇಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—(ಸಭಾಧ್ಯಕ್ಷರು ಕಳಿಸಿಕೊಟ್ಟ ಕಾಗದವನ್ನು ನೋಡಿ) ಇದು ''ಬೀದರ್ ಜಿಲ್ಲಾ ಪರಿಶಿಷ್ಟ ಸದಸ್ಯರ ಅಧಿಸೂಚಿತ ಹೆಸರುಗಳು'' ಎಂದು ಇದೆ. ಇದು ವೋಟರ್ಸ್ ಲಿಸ್ಟ್ ಆಗುತ್ತದೆಯೋ ? It is not voters list.

(INTERRUPTIONS)

ಶ್ರೀ ಅಬ್ದುಲ್ ನಜೀರ್‌ಸಾಬ್.—ವೋಟರ್ಸ್ ಲಿಸ್ಟ್ ಎನ್ನತಕ್ಕದ್ದು ತಾಂತ್ರಿಕ ಪದ. ಈ ಚುನಾವಣೆಗೆ ಸಂಬಂಧಪಟ್ಟಂತೆ ಯಾವುದೇ ವೋಟರ್ಸ್ ಲಿಸ್ಟನ್ನು ಪಬ್ಲಿಷ್ ಮಾಡುವುದಿಲ್ಲ. ಈ ಸಂಖ್ಯೆಗೆ ಅನುಗುಣವಾಗಿ ಮತ ಚಲಾಯಿಸುವ ಅರ್ಹತೆ ಏನಿದೆ, ಅವರೆಲ್ಲರಿಗೂ ವೋಟಿಂಗ್‌ಗೆ ಬರ ಬೇಕೆಂದು ಡಿವಿಜನಲ್ ಕಮಿಷನರ್ ಅವರು ನೋಟೀಸ್ ಕೊಡಿಸುತ್ತಾರೆ. ಕಾನೂನು ಚೌಕಟ್ಟಿನಲ್ಲಿ ಯಾರು ಯಾರು ಬರುತ್ತಾರೆ ಎಂದು ವಿವರ ಬೇಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಬೇರೆ ರೂಪದಲ್ಲಿ ಇದನ್ನು ತೆಗೆದುಕೊಳ್ಳಲು ತಾವು ಆಜ್ಞೆ ಮಾಡಿದರೆ, ಅದಕ್ಕೆ ಉತ್ತರ ಕೊಡಲಿಕ್ಕೆ ನಾವು ಸಿದ್ಧರಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ......

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಾವು ಕುಳಿತುಕೊಳ್ಳಿ. ನಿಮಗೆ ಚರ್ಚೆ ಮಾಡು ವುದಕ್ಕೆ ಅವಕಾಶ ಕೊಟ್ಟಿದ್ದೇನೆ. ನಿಮ್ಮ ವಾದವನ್ನು ಇಟ್ಟಿದ್ದೀರಿ. ಅವರ ವಾದವನ್ನು ಇಟ್ಟಿ ದ್ದಾರೆ.

SRI G. MADEGOWDA.—The Hon.Minister is making a wrong statement.

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತೇನೆ. ನೀವು ಕುಳಿತುಕೊಳ್ಳಿ.

ಶ್ರೀ ಜಿ. ಮಾದೇಗೌಡ.—ವೋಟರ್ಸ್ ಲಿಸ್ಟ್ ಮಾಡುವುದಿಲ್ಲ. ಅವರು ಬಂದು ವೋಟ್ ಮಾಡಿರಿ ಎಂದು ಹೇಳಿದರೆ, ಇದೇನು ತಮ್ಮ ಮನೆಯ ವ್ಯವಹಾರ ಮಾಡುತ್ತಿದ್ದಾರೆಯೋ ಇಲ್ಲಿ ?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ತಾವು ಈ ಮನೆಯ ಹಿರಿಯ ಸದಸ್ಯರು ವೋಟರ್ಸ್ ಲಿಸ್ಟ್ ಕೊಡಿ ಎಂದು ಹೇಳಿದ್ದೀರಿ. ಇದಕ್ಕೆ ವೋಟರ್ಸ್ ಲಿಸ್ಟ್ ಇಲ್ಲ.

ಶ್ರೀ ಜಿ. ಮಾದೇಗೌಡ.—ಏಕೆ ?

(ಗೊಂದಲ)

ಶ್ರೀ ಅಬ್ದುಲ್ ನಜೀರ್‌ಸಾಬ್.—ನೀವು ಟೆಕ್ನಿಕಲ್ ಆಗಿ ಕೇಳಿ. ಮೈಸೂರು ರಸ್ತೆ ಪ್ರಶ್ನೆ ಕೇಳಿ, ಕೋಲಾರ ರಸ್ತೆ ಬಗ್ಗೆ ಹೇಳಿದರೆ ಹೇಗೆ ?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ.

(ಗೊಂದಲ)

ಅಧ್ಯಕ್ಷರು.—ನಾನು ಎಲ್ಲರ ಮಾತುಗಳನ್ನು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಮಾನ್ಯ ನಜೀರ್‌ಸಾಬ್‌ರವರು ಹೇಳಿದ್ದಾರೆ.

ಶ್ರೀ ಎಂ. ರಘುಪತಿ.—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಿಲುವಳಿ ಸೂಚನೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ಮಂಡಿಸಿದ್ದಾರೆ.

ಶ್ರೀ ಎಂ. ರಘುಪತಿ.—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಿಲುವಳಿ ಸೂಚನೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ಮಂಡಿಸಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಿಲುವಳಿ ಸೂಚನೆಯನ್ನು ವಿರೋಧಪಕ್ಷದವರು ಹಾಗೂ ಮತ್ತಿತರ ಸದಸ್ಯರು ಮಂಡಿಸಿದ್ದು, ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೇ ಬೇಡವೇ ಎಂಬುದನ್ನು ತಾವು ನಿರ್ಣಯ ಮಾಡಬೇಕು.

ಈ ಹಂತದಲ್ಲಿ ಮುಖ್ಯ ಮಂತ್ರಿಗಳು ಈ ಒಂದು ನಿಲುವಳಿ ಸೂಚನೆ ತರುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಈಗ ಯಾರಿಗೂ ಅವಕಾಶ ಕೊಡುವುದಿಲ್ಲ. ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಉಮರಬ್ಬನವರೇ ತಾವೂ ಕುಳಿತುಕೊಳ್ಳಿ, ಮಾನ್ಯ ನಾರಾಯಣಕುಮಾರ್ ಅವರೇ ತಾವೂ ಕುಳಿತು ಕೊಳ್ಳಿ. ಮಾನ್ಯ ರಘುಪತಿಯವರು ಮಾತನಾಡಲಿ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಇಲ್ಲಿ ಈ ರೀತಿಯಾಗಿ ನಡೆದುಕೊಳ್ಳುವುದು ಸರಿಯಲ್ಲ. ತಾವು ಸ್ವಲ್ಪ ಹೇಳಿ...

(ಗೊಂದಲ)

ಅಧ್ಯಕ್ಷರು.—ನೀವು ಗಲಾಟೆ ಮಾಡುತ್ತೀರೆಂದು ಅವರೂ ಮಾಡುತ್ತಾರೆ. ಆದ್ದರಿಂದ ಎಲ್ಲರೂ ಕುಳಿತುಕೊಳ್ಳಿ...

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ನನಗೆ ಒಂದೂ ಅರ್ಥವಾಗುವುದಿಲ್ಲ. ಈ ಸದನವನ್ನು ಯಾರು ನಿಯಂತ್ರಣ ಮಾಡಬೇಕು ? ತಾವೋ, ಇಲ್ಲ ಸದಸ್ಯರೋ ?

(ಗೊಂದಲ)

ಅಧ್ಯಕ್ಷರು.—ಈಗ ಅವರನ್ನು ಕರೆದಿದ್ದೇನೆ, ಅವರು ಮಾತನಾಡಲಿ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಮುಖ್ಯ ಮಂತ್ರಿಯವರನ್ನು ಹೊಡೆಯುವುದಕ್ಕೆ ಬಂದಂಥ ಆ ನೀತಿವಂತರು. ಈ ಸಮಾಜದ ಬಗ್ಗೆ ಯೋಚನೆ ಮಾಡಬೇಕು...

ಅಧ್ಯಕ್ಷರು.—ಈಗ ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ, ಮಾನ್ಯ ರಘುಪತಿಯವರೇ ತಾವು ಮಾತನಾಡಿ. ಬೇರೆ ಯಾರೂ ಮಾತನಾಡುವುದು ಬೇಡ. ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ನೀವು ಮಾತನಾಡುವುದು ಬೇಡ, ಕುಳಿತುಕೊಳ್ಳಿ. ಹೀಗಾದರೆ ನಾನು ಹೇಗೆ ಸಭೆಯನ್ನು ನಡೆಸಬೇಕು ? ಘನತೆ ಗೌರವವನ್ನು ನೀವೂ ಇಟ್ಟುಕೊಳ್ಳಬೇಕು, ಅವರೂ ಇಟ್ಟುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ವಿಧಾನಸಭೆಯ, ವಿಧಾನ ಪರಿಷತ್ತಿನ ಅಧ್ಯಕ್ಷರನ್ನು ಚುನಾಯಿಸಬೇಕಾದಾಗ ವೋಟಿಂಗ್ ಸಿಸ್ಟಮ್ ಇರುವುದಿಲ್ಲ, ಅದರಲ್ಲಿ ಏನು ಮಾಡುತ್ತೇವೆ ಎಂದರೆ...

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ಅವರ ಪಾಯಿಂಟ್ ಆಫ್ ಆರ್ಡರ್ ಏನಿದೆ ಕೇಳಿ. ಮಾನ್ಯ ಮುಖ್ಯ ಮಂತ್ರಿಗಳು, ನಜೀರ್ ಸಾಬರು ಇದ್ದಾರೆ ಅವರು ಉತ್ತರ ಹೇಳುತ್ತಾರೆ, ಅವರು ಏನು ಹೇಳುತ್ತಾರೆ ಅದನ್ನು ಕೇಳಿ...

ಶ್ರೀ ಎಂ. ರಘುಪತಿ.—ವಿಧಾನಸಭಾ ಅಧ್ಯಕ್ಷರನ್ನು ಚುನಾಯಿಸಬೇಕಾಗಿದ್ದರೆ ವೋಟಿಂಗ್ ಸಿಸ್ಟಮ್ ಇರುವುದಿಲ್ಲ, ವೋಟರ್ಸ್ ಲಿಸ್ಟ್ ಪಬ್ಲಿಷ್ ಮಾಡುವುದಿಲ್ಲ. ಇಲ್ಲಿ ಮೋಷನ್ ಮೂವ್ ಮಾಡುತ್ತೇವೆ......

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಒಂದು ಮೋಷನ್ ಮೂಲಕ ಇವರನ್ನು ಚುನಾಯಿಸುತ್ತೇವೆ. ಇದಕ್ಕೆ ವೋಟರ್ಸ್ ಲಿಸ್ಟ್ ಪಬ್ಲಿಷ್ ಮಾಡುವುದಿಲ್ಲ. ನಾನು ಇಷ್ಟೇ ಹೇಳುವುದು, ವಿಧಾನಸಭಾ ಅಧ್ಯಕ್ಷರನ್ನು ಯಾವರೀತಿಯಲ್ಲಿ ಚುನಾಯಿಸುತ್ತೇವೆ ಅದೇ ನಮೂನೆಯಲ್ಲಿ ಜಿಲ್ಲಾ ಪರಿಷತ್ ಅಧ್ಯಕ್ಷರನ್ನು ಚುನಾಯಿಸುತ್ತೇವೆ. ಅವಕ್ಕೆ ವೋಟರ್ಸ್ ಲಿಸ್ಟ್ ಇರುವುದಿಲ್ಲ. ಎಲ್ಲಾ ಮೆಂಬರ್ಸ್‌ಗಳ ಸಭೆಯನ್ನು ಕರೆಯುತ್ತೇವೆ, ಸಭೆಯನ್ನು ಕರೆದು ಮೋಷನ್ ಮೂವ್ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು.—ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ, ಅವರು ಮಾತನಾಡಲಿ ಆಮೇಲೆ ಬೇರೆಯವರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಎಂ. ರಘುಪತಿ.—ಎಲೆಕ್ಟೆಡ್ ಮೆಂಬರ್ಸ್ ಸದಸ್ಯರಾಗಿರುತ್ತಾರೆ. ಶ್ರೀಮಾನ್ ಮಾದೇಗೌಡರು ಎತ್ತಿದ ಆಕ್ಷೇಪಣೆ ಸರಿಯಾದುದು ಅಲ್ಲ. ತಾವು ಈ ಸದನದಲ್ಲಿ ಇದನ್ನು ಬೇರೆ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಇಂಥ ನಿಲುವಳಿ ಸೂಚನೆಗೆ ಅವಕಾಶ ಕೊಡಬಾರದು.

(ಗೊಂದಲ)

ಅಧ್ಯಕ್ಷರು.—ಈಗ ಮಾನ್ಯ ಬಂಗಾರಪ್ಪನವರು ಮಾತನಾಡಲಿ, ಅವರು ಹೇಳಿದ ಮೇಲೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಸದಸ್ಯರ ಮನಸ್ಸಿನಲ್ಲಿ ಸ್ವಲ್ಪ ಗೊಂದಲ ಇದೆ, ನಾನು ಕಾನೂನು ಪ್ರಕಾರ ಹೇಳುತ್ತೇನೆ............

(ಗೊಂದಲ)

ಅಧ್ಯಕ್ಷರು.—ಈಗ ಯಾರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ನಥಿಂಗ್ ವಿಲ್ ಗೋ ಆನ್ ರೆಕಾರ್ಡ್. ಮಾನ್ಯ ಉಮರಬ್ಬರವರೇ ಏನು ಗಲಾಟೆ ? ಈಗ ಬಂಗಾರಪ್ಪನವರು ಮಾತನಾಡಲಿ, ಅವರು ಮಾತನಾಡಿದ ನಂತರ ನಜೀರ್‌ಸಾಬ್‌ರವರು ಉತ್ತರ ಕೊಡುತ್ತಾರೆ. ಆಮೇಲೆ ನಾನು ರೂಲಿಂಗ್ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಈಗ ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿರಿ.

ಅಧ್ಯಕ್ಷರು.—ತಾವೆಲ್ಲಾ ದಯಮಾಡಿ ಕುಳಿತುಕೊಳ್ಳಿ. ತಾವೇನು ಮಾತನಾಡದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಇದುವರೆವಿಗೂ ಕೆಲವು ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಿದ್ದಾರೆ ಪಂಚಾಯತ್‌ರಾಜ್ ಮಂತ್ರಿಗಳು ಮಾತನಾಡಿದ್ದಾರೆ. ಈಗ ಮಾನ್ಯ ಬಂಗಾರಪ್ಪನವರು ಮಾತನಾಡಲಿ ಆಮೇಲೆ ಮಾನ್ಯ ಅಬ್ದುಲ್‌ನಜೀರ್‌ಸಾಬ್‌ರವರು ಉತ್ತರ ಕೊಟ್ಟ ಮೇಲೆ ನಾನು ರೂಲಿಂಗ್ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಈಗ ಬೊಮ್ಮಾಯಿಯವರು ಏನೋ ಹೇಳುತ್ತಾರೆ ದಯಮಾಡಿ ಸ್ವಲ್ಪ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಈಗ ಒಂದು ನಿಲುವಳಿ ಸೂಚನೆ ಬಂದಿದೆ. ನಿಲುವಳಿ ಸೂಚನೆಯ ಮೇಲೆ ಇದುವರೆವಿಗೂ ಕೆಲವು ಜನ ಮಾತನಾಡಿ ತಮ್ಮ ಮನ ವೊಲಿಸಲು ಪ್ರಯತ್ನ ಮಾಡುತ್ತಿದ್ದರು. ಮಾನ್ಯ ವಿರೋಧಪಕ್ಷದ ನಾಯಕರು ಸಹ ಮಾತನಾಡಿದ್ದಾರೆ. ಆದ್ದರಿಂದ ಆ ಕಡೆಯಿಂದ ಒಬ್ಬ ಸದಸ್ಯರು ಈ ಕಡೆಯಿಂದ ಒಬ್ಬ ಸದಸ್ಯರು ಮಾತನಾಡಿದ ಮೇಲೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ. ನಾವೆಲ್ಲಾ ಒಂದು ನಿರ್ಣಯಕ್ಕೆ ಬಂದು ಅದನ್ನು ಪಾಲನೆ ಮಾಡಿಕೊಂಡು ಹೋಗೋಣ.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ ಆ ಕಡೆಯಲ್ಲಿ ಒಬ್ಬರಿಗೆ ಅವಕಾಶ ಕೊಟ್ಟರೆ ಈ ಕಡೆ ಸಹ ಒಬ್ಬರಿಗೆ ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ನಿಲುವಳಿ ಸೂಚನೆಯ ಮೇಲೆ ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಅದನ್ನು ಓದುವ ಮುಖಾಂತರ ತಮ್ಮ ಅವಗಾಹನೆಗೆ ತಂದಿದ್ದಾರೆ. ನಮ್ಮ ಪ್ರಕಾರ ಇಲ್ಲಿ ನಾವು ಒಂದು ನೀತಿ ನಿರೂಪಣೆಯ ಮೇಲೆ ಕಾರ್ಯಕ್ರಮವನ್ನು ರೂಪಿಸಿ ಕೊಂಡಿದ್ದೇವೆ. ಆ ನೀತಿಯಾದರೂ ಏನೆಂದರೆ ಜಿಲ್ಲಾ ಪರಿಷತ್ತು ಸದಸ್ಯರು ಮತದಾನಮಾಡಿ ಪ್ರಧಾನ ಮತ್ತು ಉಪಪ್ರಧಾನ ಹಾಗೂ ಅಧ್ಯಕ್ಷರು ಉಪಾಧ್ಯಕ್ಷರನ್ನು ಆಯ್ಕೆ ಮಾಡುವುದು. ಇದು ನಾವು ಹಾಕಿಕೊಂಡಿರತಕ್ಕಂಥ ಒಂದು ನೀತಿ. ಈ ಒಂದು ಕಾರ್ಯಕ್ರಮ ಈಗಾಗಲೇ ೧೬ನೇ ತಾರಿಖಿ ನಿಂದ ೨೨ನೇ ತಾರೀಖಿನವರೆಗೂ ನಡೆಯುತ್ತದೆ. ಈ ಒಂದು ಕೆಲಸ ೧೯ ಜಿಲ್ಲೆಗಳಲ್ಲಿ ಕೂಡಾ ನಡೆಯ ಬೇಕಾಗಿದೆ. ಜಿಲ್ಲಾ ಪರಿಷತ್ತು ಅಧ್ಯಕ್ಷರ ಮತ್ತು ಉಪಾಧ್ಯಕ್ಷರನ್ನು ಆಯ್ಕೆಯನ್ನು ಸಹ ಮಾಪ ಮಾಡಬೇಕಾಗಿದೆ. ಇಲ್ಲಿ ಮತದಾರರ ಪಟ್ಟಿ ಎನ್ನತಕ್ಕಂಥ ವಿಚಾರದ ಬಗ್ಗೆ ನಾವು ಪ್ರಸ್ತಾಪ ಮಾಡುತ್ತಿದ್ದೇವೆ ತಾವು ಏನು ಹೇಳಿದ್ದೀರಿ ಎಂದರೆ ಸೆಕ್ಷನ್ ೧೪೭ನ್ನು ನೋಡಿ ಅದರಲ್ಲಿ ಕ್ಲಿಯರ್ ಆಗಿದೆ. ಅದನ್ನು ನಾನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ. ಈಗ ಚುನಾಯಿತ ಪ್ರತಿನಿಧಿಗಳಿಂದ ತಾವು ಮೇಲ್ಮನೆಗೆ ಸದಸ್ಯರನ್ನು ಚುನಾಯಿಸುತ್ತೀರಿ. ಮಾನ್ಯ ಸಚಿವರಾದಂಥ ಶ್ರೀಮಾನ್ ಅಬ್ದುಲ್ ನಜೀರ್ ಸಾಬ್‌ರವರು ಹೇಳಿದರು ಎಲೆಕ್ಟೋರೋಲ್ ಪಟ್ಟಿಯನ್ನು ತಯಾರಿಸಬೇಕಾದರೆ ಅದು ಟೆಕ್ನಿಕಲ್ ವಿಚಾರ ವಾಗುತ್ತದೆಂದು. ಅದೇನೆ ಇರಲಿ ಈಗ ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ ಸದಸ್ಯರು ಚುನಾಯಿತರಾಗಿ ಬರುತ್ತಾರೆ. ವೋಟು ಕೊಡತಕ್ಕಂಥವರ ಪಟ್ಟಿಯನ್ನು ಯಾರೂ ತಯಾರು ಮಾಡುವುದಕ್ಕೆ ಹೋಗುವುದಿಲ್ಲ. ಚುನಾವಣಾ ವೇಳಾ ಪಟ್ಟಿಯನ್ನು ಮಾತ್ರ ನಿಗಧಿ ಮಾಡುತ್ತಾರೆ. ಕೆಲವು ಜನ ಸದಸ್ಯರು ಸ್ವತಂತ್ರವಾಗಿ ಚುನಾವಣೆಗೆ ನಿಂತಿರುತ್ತಾರೆ. ಕಾರಣ ವೋಟು ನಮಗೂ ಬರುತ್ತದೆಂದು ಆದ್ದರಿಂದ ಯಾವುದೇ ಪಟ್ಟಿಯನ್ನು ಎಲೆಕ್ಟೋರೋಲ್ ರೂಲ್‌ನಲ್ಲಿ ತಯಾರು ಮಾಡುವುದಕ್ಕೆ ಬರುವುದಿಲ್ಲ. ಇವತ್ತು ನಾನು ತಮ್ಮ ಮುಂದೆ ಒಂದು ಪ್ರಶ್ನೆ ಇಡುತ್ತೇನೆ.

೧-೩೦ ಪಿ. ಎಂ.

ಡಿವಿಜನಲ್ ಕಮಿಷನರ್‌ರವರು ಒಂದು ಪಟ್ಟಿಯನ್ನು ತಯಾರು ಮಾಡಿದ್ದಾರೆ. ಈ ಪಟ್ಟಿಯ ಬೆಲೆ ೨ ರೂಪಾಯಿ ಒಂದೊಂದು ಜಿಲ್ಲೆಯಲ್ಲಿ ಈ ಪಟ್ಟಿಗೆ ೩ ರೂಪಾಯಿಗಳೂ ಇವೆ. ಪಟ್ಟಿಯ ಉದ್ದದ ಮೇಲೆ ದರವನ್ನು ನಿಗದಿ ಮಾಡಿದ್ದಾರೆ. ಈ ಪಟ್ಟಿಯನ್ನು ಗುಲ್ಬರ್ಗಾ ಜಿಲ್ಲೆಯ ಡಿವಿಷನಲ್ ಕಮಿಷನರ್ ಆಗಿರುವ ಶ್ರೀ ಗೋರೆ ಅವರು ಬಿಡುಗಡೆ ಮಾಡಿದ್ದಾರೆ. ಈ ಪಟ್ಟಿಯಲ್ಲಿ ಜಿಲ್ಲಾ ಪರಿಷತ್ತಿಗೆ ಮತದಾನ ಮಾಡುವ ಹಾಗೂ ಮಂಡಲ ಪಂಚಾಯಿತಿಗೆ ಪ್ರಧಾನ ಮತ್ತು ಉಪ ಪ್ರಧಾನ ರನ್ನು ಆರಿಸುವವರೆಲ್ಲರ ಹೆಸರೂ ಇದೆ. ಅಧಿಸೂಚನೆ ಸಂಖ್ಯೆ : ಡಿ. ಪಿ. ಎ. ಆರ್. ೧೭ ಸೋಅಂಡ್ ಸೋ ಡೇಟ್ ೧೩-೧-೮೭ ಎಂದು ಇದೆ. ಈ ತರಹ ಪಟ್ಟಿಯನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಮಾಡಿದ್ದಾರೆ. ಈ ರೀತಿ ಪಟ್ಟಿಯನ್ನು ತಯಾರು ಮಾಡಿ ಬಿಡುಗಡೆ ಮಾಡುವುದಕ್ಕೆ ಡಿವಿಷನಲ್ ಕಮಿಷನರ್‌ರವರಿಗೆ ಯಾರು ಅಧಿಕಾರವನ್ನು ಕೊಟ್ಟವರೆಂದು ಸರ್ಕಾರವನ್ನು ನಾನು ಕೇಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು. ಜಿಲ್ಲಾ ಪರಿಷತ್ತಿನ ರೂಲ್ ೧೪೭ರ ಪ್ರಕಾರ ಅಂದರೆ, ನೀವು ಹೇಳಿದ ಪ್ರಕಾರದಲ್ಲಿಯೂ ಕೂಡ ಈ ಪಟ್ಟಿಯನ್ನು ತಯಾರು ಮಾಡತಕ್ಕಂಥ ಅವಶ್ಯಕತೆ ಡಿವಿಷನಲ್ ಕಮಿಷನರ್‌ರವರಿಗೆ ಎಲ್ಲಿ ಇತ್ತು ? ಯಾವ ಕಾನೂನು ಪ್ರಕಾರ ಈ ಅಧಿಕಾರವನ್ನು ಅವರು ಪಡೆದಿದ್ದಾರೆ ? ಇದರ ಅರ್ಥ ಏನು ಎಂದರೆ, ಮಾನ್ಯ ಅಧ್ಯಕ್ಷರೇ, ಶಾಸನ ಸಭಾ ಸದಸ್ಯರು ಆಯ್ಕೆಯಾದ ಮೇಲೆ ಅವರ ಹೆಸರುಗಳುಳ್ಳ ಪಟ್ಟಿಯನ್ನು ತಮ್ಮ ಕಾರ್ಯಾಲಯದಲ್ಲಿ ಇಟ್ಟು ಕೊಂಡಿರುತ್ತೀರಿ. ಏಕೆಂದರೆ, ಲೆಜಿಸ್ಲೇಟೀವ್ ಕೌನ್ಸಿಲ್‌ಗೆ ಚುನಾವಣೆ ಬಂದ ಮೇಲೆ ಯಾರು ಯಾರು ಇಲ್ಲಿ ಮತದಾನ ಮಾಡುವುದಕ್ಕೆ ಅರ್ಹರಿದ್ದಾರೆಂದು ಇದರಿಂದ ತಮಗೆ ತಿಳಿಯುತ್ತದೆ. It is not warranted under any of the provisions of this Act. ಅದನ್ನು ಮಾಡಿದ ಮೇಲೆ ಅದರ ಅರ್ಥ ಏನು ? ಆಯಾ ಜಿಲ್ಲೆಯಲ್ಲಿ ಚುನಾಯಿತರಾದವರ ಹೆಸರುಗಳು ಆಯಾ ಜಿಲ್ಲೆಯವರಿಗೆ ಗೊತ್ತಿರುತ್ತದೆ. ನಮಗೆ ಗೊತ್ತಾಗುವುದಿಲ್ಲ. ನಾವುಗಳು ಶಾಸನ ಸಭೆಯಲ್ಲಿ ಅಥವಾ ಮತ್ತೊಂದು ಕಡೆಯಲ್ಲಿಯೂ ಚರ್ಚೆ ಮಾಡುವಾಗ ಯಾರು ಯಾರು ಎಂಬುದನ್ನು ತಿಳಿದುಕೊಳ್ಳ ಬಹುದು. ಅವರುಗಳು ಯಾವ ಪಕ್ಷದವರು ಎಂದು ತಿಳಿದುಕೊಳ್ಳಬಹುದು. ಶಾಸನ ಸಭೆಗೆ ಆಯ್ಕೆ ಯಾದ ಪ್ರತಿಯೊಬ್ಬ ಸದಸ್ಯನಿಗೂ ಎಲಾ ರೀತಿಯ ಹಕ್ಕು ಇರುತ್ತದೆ. ಅವರು ಯಾವುದೇ ಪಕ್ಷದವ ರಿರಬಹುದು. ವಿಧಾನ ಪರಿಷತ್ತಿನ ಸದಸ್ಯರು ಹಾಗೂ ರಾಜ್ಯಸಭೆ ಸದಸ್ಯರು ಮತ್ತು ಲೋಕ ಸಭೆ

ಸದಸ್ಯರಿಗೂ ಎಲ್ಲಾ ರೀತಿಯ ಹಕ್ಕುಗಳು ಇರುತ್ತವೆ. ಈ ಹಕ್ಕುಗಳು ಯಾವುವು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿರುತ್ತದೆ. ರಾಜ್ಯ ಸಭೆಯ ಸದಸ್ಯರಿಗೆ ಯಾವ ತರಹದ ಅಧಿಕಾರ ಇರುತ್ತದೆ, ವಿಧಾನ ಪರಿಷತ್ತಿನ ಸದಸ್ಯರಿಗೆ ಯಾವ ತರಹ ಅಧಿಕಾರ ಇರುತ್ತದೆ ಹಾಗೂ ಲೋಕ ಸಭಾ ಸದಸ್ಯರಿಗೆ ಯಾವ ತರಹದ ಅಧಿಕಾರ ಇರುತ್ತದೆಯೋ ಅಷ್ಟನ್ನು ಮಾತ್ರ ಉಪಯೋಗ ಮಾಡಬೇಕು. ನಾನು ಕೇಳುತ್ತಿದ್ದೇನೆ, ಈ ವೋಟರ್ ಲಿಸ್ಟನ್ನು ತಯಾರು ಮಾಡುವ ಅವಶ್ಯಕತೆ ಏನಿತ್ತು ? ಮಾನ್ಯ ನಜೀರ್‌ಸಾಬ್‌ರವರು ಹಾಗೂ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣಹೆಗಡೆಯವರು ಇದಕ್ಕೆ ಏಕೆ ಅವಕಾಶವನ್ನು ಕೊಟ್ಟರು ? Under what Provision ಈ ಲಿಸ್ಟನ್ನು ಪ್ರಿಪೇರ್ ಮಾಡಿದ್ದೀರಿ ? Which list we have to depend upon ? ಗುಲ್ಬರ್ಗಾದಲ್ಲಿರುವ ಡಿವಿಷನಲ್ ಕಮಿಷನರ್‌ರವರು ಬೀದರ್ ಜಿಲ್ಲೆಯ ವೋಟರ್ ಲಿಸ್ಟ್ ಸಹ ಮಾಡಿದ್ದಾರೆ. ಬೀದರ್ ಜಿಲ್ಲೆಯ ವೋಟರ್ ಲಿಸ್ಟ್ ಗುಲ್ಬರ್ಗಾದಲ್ಲಿ ತಯಾರಾಗುತ್ತದೆ. ಇದನ್ನು ಏತಕ್ಕೆ ಹೇಳುತ್ತೇನೆಂದರೆ, ಮಾನ್ಯ ಸಭಾಧ್ಯಕ್ಷರೇ, ಇದು ಮತದಾನದ ಹಕ್ಕು ಎನ್ನತಕ್ಕ ವಿಷಯವನ್ನು ಹೇಳುತ್ತಾರೆ. ಇನ್ನೂ ಒಂದು ವಿಷಯ ಹೇಳುತ್ತೇನೆ, ಶಿವಮೊಗ್ಗ ಜಿಲ್ಲಾಧಿಕಾರಿಗಳು ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ೧೭ನೇ ತಾರೀಖಿನ ದಿವಸ ಜಿಲ್ಲಾ ಪರಿಷತ್ತಿನ ಅಧ್ಯಕ್ಷರನ್ನು ಆಯ್ಕೆ ಮಾಡುವುದಕ್ಕೆ ಸಮಯವನ್ನು ನಿಗದಿ ಮಾಡಿದ್ದೇವೆ, ನೀವು ಮೇಲ್ಕಂಡ ದಿವಸ ಬರಬೇಕೆಂದು ತಿಳಿಸಿದ್ದಾರೆ. ಈ ನೋಟೀಸ್ ನನಗೆ ಬಂದಿದೆ. ನಾವು ಬರಬೇಕೆಂದು ಅವರು ತಿಳಿಸಿರುತ್ತಾರೆ. ಆ ಬಗ್ಗೆ ನಮಗೆ ನೋಟೀಸ್ ಕೂಡ ಬಂದಿದೆ. ಚುನಾವಣೆಯ ಮೊದಲನೇ ದಿವಸ, ಇಷ್ಟನೇ ತಾರೀಖಿಗೆ ಸರ್ಕ್ಯೂಟ್ ಹೌಸ್‌ನಲ್ಲಿ ಇರುತ್ತೇವೆ, ತಾವುಗಳು ಬರಬೇಕೆಂದು ಇದೆ. ಇದನ್ನು ನಮ್ಮ ಡಿವಿಜನಲ್ ಕಮಿಷನರ್ ಅವರು ಕಳುಹಿಸಿರತಕ್ಕಂಥಾದ್ದು. ಅವರು ಇಷ್ಟನೆಯ ತಾರೀಖಿನ ಒಳಗಾಗಿ ಯಾರು ಯಾರು ಸೂಚನೆ ಮಾಡುತ್ತೀರೋ ಮಾಡಿ, ಅದನ್ನು ನಮಗೆ ಕಳುಹಿಸಿ. ನಾವು ೧೭ನೇ ತಾರೀಖಿಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ಇಟ್ಟುಕೊಂಡಿದ್ದೇವೆ you please come and attend this meeting ಎಂದು ನಮಗೆ ನೋಟೀಸ್ ಬಂದಿದೆ. ಈ ಲಿಸ್ಟನ್ನು ನೋಟೀಸ್ ಕೊಡುವುದಕ್ಕೋಸ್ಕರವಾಗಿ ತಯಾರು ಮಾಡುತ್ತಾರೆ. ಏಕೆಂದರೆ ಡಿವಿಜನಲ್ ಕಮಿಷನರ್‌ರವರು ಈ ಲಿಸ್ಟನ್ನು ಹೊರಡಿಸುತ್ತಾರೆ. ಡೆಪ್ಯುಟಿ ಕಮಿಷನರ್‌ರವರು ಆಯಾ ಜಿಲ್ಲೆಯದನ್ನು ಮಾಡಿ ಡಿವಿಜನಲ್ ಕಮಿಷನರ್‌ರವರಿಗೆ ಕಳುಹಿಸುತ್ತಾರೆ. ಏತಕ್ಕೆ ಈ ಲಿಸ್ಟ್ ತಯಾರು ಮಾಡಬೇಕಾಗುತ್ತದೆ ಎಂದರೆ, ವೋಟಿನ ಹಕ್ಕು ಯಾರಿಗೆ ಇದೆ ಎಂದು ಡೆಪ್ಯುಟಿ ಕಮಿಷನರ್ ರವರಿಗೆ ಗೊತ್ತಾಗಬೇಕು. ''not only this act gives powers to the elected members of the Zilla Parishad, but also the other Members who did not contest in Zilla Parishad elections. But, still they have got a right to vote and they can participate in the proceedings of the election of the Chairman and the Vice-Chairman of the concerned Zilla Parishads'' ಆದುದರಿಂದ ಮಾನ್ಯ ನಜೀರ್‌ಸಾಬ್‌ರವರು ಟೆಕ್ನಿಕಲ್ ಆಗಿ ಹೋಗುವುದು ಬೇಡ. That is how I feel.........ನೀವೇ ಲಿಸ್ಟ್ ತಯಾರು ಮಾಡಿ ಡಿಸ್ಪ್ಯೂಟ್ ಮಾಡುತ್ತೀರಿ. ಅದರ ಅವಶ್ಯಕತೆ ಇಲ್ಲ ಎಂದು ನನ್ನ ಭಾವನೆ. This is as good as the Government itself has prepared this list. Why do you dispute your own list? You please accept this list under which all the Members have got a right to vote even under this act also. ಮಾನ್ಯ ಮುಖ್ಯಮಂತ್ರಿಯವರು ಕೂಡ ಹೇಳಿದ್ದಾರೆ. ಇದು ನೀತಿ ಪ್ರಶ್ನೆ, ನೀತಿ ಬಗ್ಗೆ ಮಾತ್ರ ಮಾತನಾಡೋಣ ಎಂಬುದನ್ನು ನೋಡಿದಾಗ ನಮ್ಮ ವಿಚಾರಗಳನ್ನು ಸ್ಪಷ್ಟಪಡಿಸಲು ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ತರತಕ್ಕಂಥಾದ್ದು ಸರಿಯಿದೆ. It is a different issue altogether. But confining my argument to this point only. ನಾನು ಹೇಳುವ ಹಾಗಿದ್ದರೆ, ಇದನ್ನು ಈ ಲಿಸ್ಟನ್ನು ಅಕ್ಸೆಪ್ಟ್ ಮಾಡಿಕೊಳ್ಳಿ. ಇದು ಸರ್ಕಾರದ್ದು. Please do not try to dispute this. ಆಮೇಲೆ ನಾನು ಮುಖ್ಯಮಂತ್ರಿಗಳವರಿಗೆ ಹೇಳುವುದು ಇಷ್ಟೇ. ಮಾನ್ಯ ಮುಖ್ಯಮಂತ್ರಿಗಳವರು, ತಾವು ವಿಚಾರ ಮಾಡಬೇಕು, ನಾವು ಚರ್ಚೆ ಮಾಡತಕ್ಕಂಥಾದ್ದು ಬರವಣಿಗೆಯ ಮೂಲಕ ಉದ್ಭವವಾಗಿರತಕ್ಕಂಥ ನೀತಿ ತಾರತಮ್ಯದ ಮಾತು. ಈಗ ಚುನಾವಣೆ ದಿನಾಂಕ ಫಿಕ್ಸ್ ಆಗಿದೆ. ಇದನ್ನು ಖರ್ಗೆಯವರು ಮತ್ತು ಮಾನ್ಯ ಮೊಯಿಲಿಯವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಜರೂರಾತಿ ವಿಚಾರ ಇದೆ, ಏನು ಜರೂರಾತಿ ವಿಚಾರ ಇಲ್ಲ ಇದರಲ್ಲಿ? To-day is 10th. Suppose you do not disusse

this matter and the Government does not reply of this an utter confusion will be privailing under a different provision of our rules. ನೀವು ಏನಾದರೂ ಉತ್ತರ ಕೊಡದೇ ಅಂತಿಮ ತೀರ್ಮಾನಕ್ಕೆ ಬರದಿದ್ದರೆ this leads to certain delay in taking up the matter ನಾಳೆ ಅನ್‌ನೆಸೆಸರಿಯಾಗಿ ಕೆಲವರು ಹಕ್ಕಿಲ್ಲ. ಕೆಲವರು ಹಕ್ಕಿದೆ ಎನ್ನುತಕ್ಕಂಥ ಒಂದು ಸಮಸ್ಯೆಯನ್ನು ಉದ್ಭವ ಮಾಡುವುದು ಬೇಡ. ಚರ್ಚೆಗೆ ಒಪ್ಪಿಗೆ ಕೊಟ್ಟಿದ್ದೀರಿ. ಈ ಬಗ್ಗೆ ಬೇರೆ ಅಭಿಪ್ರಾಯವನ್ನು ಕೂಡ ಮಾನ್ಯರು ಕೊಡುತ್ತಾ ಇದ್ದಾರೆ. ಈಗ ಅದನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತೆಗೆದುಕೊಳ್ಳೋಣ. ನೀವೆ ಡೇಟ್ ಫಿಕ್ಸ್ ಮಾಡಿದ್ದೀರಿ, ನೀವೇ ಅರ್ಜೆಂಟಾಗಿ ಉತ್ತರ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಅಡ್ಜರ್ನ್‌ಮೆಂಟ್ ಮೋಷನ್ ತರತಕ್ಕಂಥ ಅವಶ್ಯಕತೆ ನಮಗೆ ಏನು ಇದೆ? ಮಾನ್ಯ ಮುಖ್ಯಮಂತ್ರಿಯವರು ಚರ್ಚೆಗೆ ಒಪ್ಪಿದ್ದಾರೆ. ಇದನ್ನು ಈಗ ಚರ್ಚೆಗೆ ತೆಗೆದುಕೊಳ್ಳಬೇಕು. ಏಕೆಂದರೆ, ನಮ್ಮ ನಾಯಕರು ಮತ್ತು ಉಪನಾಯಕರು ಕೂಡ ಈ ಬಗ್ಗೆ ಹೇಳಿದ್ದಾರೆ. ಅನೇಕ ಬಾರಿ ವಿವರಣೆಗಳನ್ನು ನಾವು ಕೂಡ ಹೇಳಬೇಕಾಗುತ್ತದೆ. ಮೇಲ್ಮನೆಯ ಸದಸ್ಯರಾದ ಕೆ.ಎನ್. ನಾಗೇಗೌಡರು ಹೇಳಿದ ಹಾಗೆ ವಿಧಾನ ಪರಿಷತ್ತಿನ ಅನೇಕ ಸದಸ್ಯರು ಮತದಾರರು ಆಗಿದ್ದಾರೆ ಎನ್ನುವ ಅಭಿಪ್ರಾಯ ಇದೆ. ನಿಮ್ಮ ಆದೇಶ ಏನು ಇದೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಲಿಸ್ಟ್ ಕೊಟ್ಟಿಲ್ಲ ಎನ್ನುತಕ್ಕಂಥಾದ್ದು ಇದೆ. ಕೆಲವು ಕಡೆ ಕೊಟ್ಟಿದ್ದಾರೆ, ಕೆಲವು ಕಡೆ ಕೊಟ್ಟಿಲ್ಲ.

ಅಧ್ಯಕ್ಷರು.—ತಾವುಗಳು ದಯಮಾಡಿ ಮುಗಿಸಿ...

ಶ್ರೀ ಜಿ. ಮಾದೇಗೌಡ.—ಡಿವಿಜನಲ್ ಕಮಿಷನರ್‌ರವರಿಗೆ ಹೇಳಿ...

ಅಧ್ಯಕ್ಷರು.—ಮಾನ್ಯ ಗೌಡರವರೇ ತಾವುಗಳು ರೂಲ್ಸ್ ರೆಗ್ಯುಲೇಷನ್ಸ್ ತಿಳಿದುಕೊಂಡಿಲ್ಲವೇ? ಒಬ್ಬರು ಮಾತನಾಡುವಾಗ ಇನ್ನೊಬ್ಬರು ಮಾತನಾಡಬಾರದು, ಅವಕಾಶ ಇದ್ದಾಗ ಮಾತ್ರ ಮಾತನಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳುವುದು ಇಷ್ಟೇ, ಲಿಸ್ಟ್ ಕೇಳಿದಾಗ ಒಂದು ಕಡೆ ಕೊಡುವುದು, ಇನ್ನೊಂದು ಕಡೆ ಕೊಡೊಲ್ಲ ಎನ್ನುವುದು ಅಥವಾ ಯಾರು ಯಾರು ವೋಟ್ ಮಾಡಲು ಸದಸ್ಯರಿದ್ದಾರೆ ಅವರು ಲಿಸ್ಟ್ ಕೊಡಿ ಎಂದು ವಿಭಾಗಾಧಿಕಾರಿಗಳನ್ನು ಕೇಳಿದರೆ ಕೊಡುವುದಿಲ್ಲ, ಎಂಡಾರ್ಸ್‌ಮೆಂಟ್ ಸಹ ಕೊಡುವುದಿಲ್ಲ ಎನ್ನುವುದು ಸರ್ಕಾರದ ನೀತಿಗೆ ಬಾಹಿರವಾದ ವಿಷಯವಾಗುತ್ತದೆ. ಇದಕ್ಕೆಲ್ಲಾ ಅವಕಾಶ ಕೊಡಬೇಡಿ. ದಯವಿಟ್ಟು ಟೆಕ್ನಿಕಲ್ ಪಾಯಿಂಟ್‌ಗೆ ಹೋಗದೆ if that is a fact it is incorrect. Why are you going into the technical point, ಅದಕ್ಕೋಸ್ಕರ ನಾನು ಹೇಳುವುದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಚರ್ಚೆಗೆ ಒಪ್ಪಿಗೆ ಕೊಟ್ಟಿರುವುದರಿಂದ ಒಂದು ಸಲಹೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ನಿಲುವಳಿ ಸೂಚನೆಯಾಗಿ ಬರುವುದಕ್ಕೆ ಸಾಧ್ಯವಿಲ್ಲ, ಬೇರೆ ರೀತಿ ಚರ್ಚೆಗೆ ಸಿದ್ಧವೆಂದು ......ಎಂದು ಸ್ಪಷ್ಟವಾಗಿ ಹೇಳಿದ್ದುದು ದಾಖಲೆಯಲ್ಲಿದೆ. ಆದರ ಬಗ್ಗೆ ಶಂಕೆ ಇಲ್ಲ. ಆಮೇಲೆ ತಾವು ಚರ್ಚೆಗೆ ಸಮಯವನ್ನು ಫಿಕ್ಸ್ ಮಾಡಲು ಅವಕಾಶ ಬರುತ್ತದೆ. ನಮ್ಮ ವಿಷಯ ಏನೆಂದರೆ ಈ ವಿಷಯ ಇವತ್ತು ತೀರ್ಮಾನವಾಗದೇ ಮುಂದಕ್ಕೆ ಹೋದರೆ ಎಲೆಕ್ಷನ್ ಟೈಮಿನಲ್ಲಿ ಇಲ್ಲದ ಗೊಂದಲ ಕಷ್ಟಗಳಾಗುತ್ತವೆ. ಆದ್ದರಿಂದಲೇ ಈ ಜರೂರಾತಿಯನ್ನೇ ಮುಖ್ಯ ಗುಣವಾಗುಳ್ಳ ನಿಲುವಳಿ ಸೂಚನೆಯಾಗಿ ಇದನ್ನು ತಂದಿದ್ದೇವೆ. ಆದ್ದರಿಂದ ತಾವು ಇದಕ್ಕೆ ಒಪ್ಪಿಗೆ ಕೊಡಬೇಕು.

† ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಅಧ್ಯಕ್ಷರೇ, ನಾವು ಈ ನಿಲುವಳಿ ಸೂಚನೆ ಕೊಡಬೇಕಾಗಿ ಬಂದ ಜರೂರಾತಿ ಬಗ್ಗೆ ನಮ್ಮ ನಾಯಕರು ಅನೇಕ ಸ್ನೇಹಿತರು ಈಗಾಗಲೇ ಮಾತನಾಡಿದ್ದಾರೆ. ಇದರ ಪ್ರಮೇಯವನ್ನು ಟ್ರೆಜರಿ ಬೆಂಚಿನವರಾಗಲೀ ಮಾನ್ಯ ಮಂತ್ರಿಗಳಾಗಲೀ ಮುಖ್ಯಮಂತ್ರಿಗಳಾಗಲೀ ಅಲ್ಲಗಳೆಯುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ನಿಲುವಳಿ ಸೂಚನೆಗೆ ಬೇಕಾದ ಎಲ್ಲಾ ಗುಣ ಶೇಷಗಳು ನಮ್ಮ ಈ ನಿಲುವಳಿ ಸೂಚನೆಯಲ್ಲಿವೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅವರಾದರೂ ಇದೆಲ್ಲಾ ಅದರಲ್ಲಿಲ್ಲ ಎಂದು ಬೇರೆ ಯಾವುದಾದರೂ ಮೋಷನ್‌ನಲ್ಲಿ ತನ್ನಿ ಎಂದು ಹೇಳಬಹುದು. ಆದರೆ ಈಗಾಗಲೇ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳ ಚುನಾವಣೆಗಳ ಬಗ್ಗೆ ವಿಭಾಗಾಧಿಕಾರಿಗಳು ಪಟ್ಟಿ ಮಾಡಿ ಸದಸ್ಯರ ಹೆಸರು ಪ್ರಚುರಪಡಿಸಿದ್ದಾರೆ. ನಮಗೂ ಇದರ ಬಗ್ಗೆ ಗೊತ್ತಿರಲಿಲ್ಲ, ಈಗ ತಾನೇ ಪಟ್ಟಿ ನಮ್ಮ ಕೈಗೆ ಬಂತು. ನಾವಾದರೂ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳ ಚುನಾವಣೆಗಳು ಕಾನೂನು ಪ್ರಕಾರ ಆಗುತ್ತದೆಂದು ಅಂದುಕೊಂಡಿದ್ದೆವು. ಏನಾದರೂ ತೊಂದರೆ ಬಂದರೆ ಜಿಲ್ಲಾ ಪರಿಷತ್ತು ಅಮೆಂಡ್ ಮೆಂಟಿಗೆ ಇಲ್ಲ, ಗವರ್ನರ್ಸ್ ಅಡ್ರೆಸ್ ಮೇಲೆ ವಿಶದವಾಗಿ ಆ ಸಂದರ್ಭದಲ್ಲಿ ಚರ್ಚೆ ಮಾಡೋಣ ಎಂದಿದ್ದೆವು. ಆದರೆ ಈಗ ಎಂಥ ಪ್ರಶ್ನೆ ಉದ್ಭವವಾಗಿದೆ ಎಂದರೆ ಈ ಲಿಸ್ಟನ್ನು ನೋಡಿದರೆ ಕಾನೂನು ಉಲ್ಲಂಘನೆ ಮಾಡಿ ಗ್ರಾಸ್ ರೂಟ್ ಲೆವೆಲ್‌ನಲ್ಲಿ ತಾವು ಕಾನೂನುಗಳನ್ನು ಮಾಡಿ ಎಲೆಕ್ಷನ್ ನಡೆಸಿದ್ದೇವೆಂದು ನೀವು ಹೇಳಿದ ಪ್ರಕಾರ ಇದಾವುದೂ ನಡೆಯುತ್ತಿಲ್ಲ. ಇದರಲ್ಲಿ ಸರ್ಕಾರದ ತಪ್ಪಿದೆ ಎಂಬುದನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ರೂಲ್ ೫೯ರ ಪ್ರಕಾರ ನಾವು ನಿಲುವಳಿ ಸೂಚನೆಗೆಂದು ತಂದಿರುವುದನ್ನು ಜರೂರಾದದ್ದೆಂದು ತಾವೂ ಒಪ್ಪುತ್ತೀರಿ. ಈ ತಿಂಗಳ ೧೬ರಂದೇ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗೆ ಚುನಾವಣೆಗಳು ಆರಂಭವಾಗುತ್ತವೆ. ನೋಟಿಫಿ ಕೇಷನ್ ಅನ್ನು ಡಿವಿಜನಲ್ ಕಮಿಷನರ್‌ರವರು ಕೊಟ್ಟಿದ್ದಾರೆ, ಅಥವಾ ಕೊಡುವ ಪ್ರೊಸೆಸ್‌ನಲ್ಲಿ ಇದ್ದರೆ ಕೊಟ್ಟಮೇಲೆ ನೋಡೋಣ ಎಂದು ತಾವು ಹೇಳಬಹುದಾಗಿತ್ತು. ಈ ಬಗ್ಗೆ ಕಾನೂನು ಏನು ಇದೆ ಇದರಲ್ಲಿ ಅದನ್ನು ಸ್ವಲ್ಪ ಆಲೋಚನೆ ಮಾಡಬೇಕಾಗಿದೆ. ಅದಕ್ಕಿಂತ ಮೊದಲು ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳಬೇಕೆಂದು ನಾವು ಕೊಟ್ಟಂತಹ ಸೂಚನೆ ಎಷ್ಟರ ಮಟ್ಟಿಗೆ ಯೋಗ್ಯ, ಅಯೋಗ್ಯ ಇದೆ ಎಂಬುದನ್ನು ತಮಗೆ ಮನವರಿಕೆ ಮಾಡಿಕೊಡಬೇಕಾದುದು ನಮ್ಮ ಕರ್ತವ್ಯ ಅಷ್ಟಕ್ಕೆ ಮಾತ್ರ ನನ್ನ ಪ್ರಸ್ತಾವನೆಯನ್ನು ಸೀಮಿತಗೊಳಿಸುತ್ತೇನೆ. ಇದರಲ್ಲಿ Ministerial responsibility is the subject matter of this adjournment motion. ಅದು ಅಲ್ಲವೆಂದು ಹೇಳುವುದಕ್ಕಾಗುವುದಿಲ್ಲ. 'Generally speaking the subject matter of an adjournment motion must have direct or indirect relation to the conduct or default on the part of the Government. Here is a case where the State Government observing particular equity...ದಾರಿ ತಪ್ಪಿ ಹೋದಂತಹ ಒಂದು ಪರಿಸ್ಥಿತಿ ಇದೆ. Is it not Ministerial responsibility? ಇದನ್ನು ಬರೀ ಡಿವಿಜನಲ್ ಕಮಿಷನರ್ ರವರು ಮಾಡಿದರು, ಜಿಲ್ಲಾಧಿಕಾರಿಗಳು ಮಾಡಿದರು ಎಂದು ಅಷ್ಟಕ್ಕೆ ಮಾತ್ರ ಸರಕಾರ ನೆಮ್ಮದಿ ಅಥವಾ ತೃಪ್ತಿಪಟ್ಟುಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. You are directly responsible. Then, it says:

> and must be in the nature of criticism of the action of the Government of India either for having done some action or for having ommitted to do some action which was uregently necessary at the moment'.

ತಾವು ಕರ್ತವ್ಯ ಚ್ಯುತರಾದಾಗ ಅದನ್ನು ಸರಿಪಡಿಸಿಕೊಳ್ಳಲು ಮತ್ತು ಅದನ್ನು ತಡೆಯುತಕ್ಕಂತಹ ವಿಚಾರ ಕೂಡ ಇಲ್ಲಿ ಬಹಳ ಅವಶ್ಯಕತೆಯಾದುದರಿಂದ ಮಿನಿಸ್ಟೀರಿಯಲ್ ರೆಸ್ಪಾನ್ಸಿಬಲಿಟಿಯನ್ನು ನಾವು ನಮ್ಮ ಸರ್ಕಾರಕ್ಕೆ ಕೊಡಬೇಕೆಂಬ ಉದ್ದೇಶದಿಂದ ಇದನ್ನು ತಂದಿದ್ದೇವೆ. Now Sec. 159 in the Zilla Parishad Act. It says:

> '159, Publication of names of members. The names of members elected to any Zilla Parishad shall be reported to the Government which shall notify the names in the *official gazette.*' It has been now done...

ಈ ಸ್ಟೇಜ್‌ನಲ್ಲಿ ನಾವು ಈಗ ಇದ್ದೇವೆ. Here 'Government' means yourself. ನಮಗೆ ಗೆಜೆಟ್ ಕಾಪಿ ಸಿಕ್ಕಲಿಲ್ಲ. ಇವತ್ತು ಏನು ಈ ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ ಇದೆ ಅದು ಗೆಜೆಟ್‌ಗೆ ಅನುಗುಣವಾಗಿ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅದೇ ರೀತಿ ಗೆಜೆಟ್ ನೋಟಿಫಿ ಕೇಷನ್ ಅನ್ನು ಮಾಡಿದ್ದೀರೆಂದು ನಾನು ತಿಳಿದುಕೊಂಡಿದ್ದೇನೆ. ರೂಲ್ ೧೫೯ರ ಪ್ರಕಾರ ತಮಗೆ

ಇರತಕ್ಕಂತಹ ಅಧಿಕಾರವನ್ನು ಚಲಾಯಿಸಿದ್ದೀರಿ. ಇದರಿಂದಾಗಿ ಮಿನಿಸ್ಟೀರಿಯಲ್ ರೆಸ್ಪಾನ್ಸಿಬಲಿಟಿಯನ್ನು ಡಿಸ್‌ಚಾರ್ಜ್ ಮಾಡುವಾಗ ಎಲ್ಲಿ ತಪ್ಪಿದ್ದೀರಿ ಮತ್ತು ಎಲ್ಲೆಲ್ಲಿ ಕಾನೂನಿನ ಉಲ್ಲಂಘನೆಯಾಗಿದೆ ಪ್ರಜಾಪ್ರಭುತ್ವದ ಸಮಾಧಿಯಾಗಿದೆ ಎನ್ನುವುದನ್ನು ನಾವು ವಿರೋಧಪಕ್ಷದಲ್ಲಿದ್ದುಕೊಂಡು ತಮ್ಮ ಗಮನಕ್ಕೆ ತರಬೇಕಾಗಿದೆ. ರೂಲ್ 65ರಲ್ಲಿ ಯಾರನ್ನು ಸೇರಿಸಬೇಕೆಂದು ಇದೆ ಎಂದರೆ, ಅಸೆಂಬ್ಲಿ ಮೆಂಬರ್ಸ್, ಪಾರ್ಲಿಮೆಂಟ್ ಮೆಂಬರ್ಸ್ ಎಂದು ಎರಡು ಕೆಟಗರಿ ಇರಬೇಕಾಗುತ್ತದೆ. ಇದರಲ್ಲಿ ಒಂದನೆಯದಾಗಿ,

> (3) (a) Subject to the provision of clause (b), the members of the State Legislative Assembly and the State Legislative Council and members of Parliament representing a part or whole of the district whose constituencies lie within the jurisdiction of the Zilla Parishad and the members of the State Legislative Council not elected from territorial constituencies ordinarily resident in the district shall be entitled to take part in the proceedings of and to vote at the meetings of the Zilla Parishad.

ಈಗ ಇದರಲ್ಲಿ ಎರಡು ಭಾಗ ಇದೆ. 65(3)(ಎ) ನಲ್ಲಿ ಎರಡು ಭಾಗ ಇದೆ. ಒಂದು ಭಾಗ ಎಂ.ಎಲ್.ಎ. ಗಳದು ಮತ್ತು ಲೋಕಸಭಾ ಮೆಂಬರ್‌ಗಳದು. ಈಗ ಮೆಂಬರ್ಸ್ ಆಫ್ ಪಾರ್ಲಿಮೆಂಟಿನಲ್ಲಿ ಎರಡು ಭಾಗ ಇದೆ. ಅದು ಲೋಕಸಭಾ ಮೆಂಬರ್ಸ್ ಮತ್ತು ರಾಜ್ಯ ಸಭಾ ಮೆಂಬರ್ಸ್ ಎಂದು ಈ ರೀತಿ ಎರಡು ಭಾಗಗಳು ಇವೆ. ಎಲೆಕ್ಟೆಡ್ ಪೀಪಲ್, ಇಂಟರ್‌ಪ್ರಿಟೇಷನ್ ಆಫ್ ದಿ ಆ್ಯಕ್ಟ್, they consituue by two category of people namely lok Sabha memhers, and Rajya Sabha Members. ಈಗ ಲೋಕಸಭಾ ಮೆಂಬರ್ಸ್‌ಗಳಿಗೆ ಮಾತ್ರ ಈ ಅಧಿಕಾರವನ್ನು ಕೊಡಬೇಕೆಂದು ಈ ನಮ್ಮ ಸದನದ ಇಚ್ಛೆಯಾಗಿದ್ದರೆ ಕಾನೂನನ್ನು ಪಾಸು ಮಾಡುವಾಗ ಲೋಕಸಭಾ ಸದಸ್ಯರು ಎಂದು ಹಾಕುತ್ತಿದ್ದರು. ಮೆಂಬರ್ಸ್ ಆಫ್ ಪಾರ್ಲಿಮೆಂಟ್ಸ್ ಎಂದು ಹಾಕಬೇಕಾದಂಥ ಆವಶ್ಯಕತೆ ಇರಲಿಲ್ಲ. ಮೆಂಬರ್ಸ್ ಆಫ್ ಪಾರ್ಲಿಮೆಂಟ್ ಎಂದು ಸೇರಿಸಿದಾಗ ರಾಜ್ಯಸಭಾ ಮೆಂಬರ್ಸ್ ಲೋಕಸಭಾ ಮೆಂಬರ್ಸ್ ಇಬ್ಬರನ್ನೂ ಸೇರಿಸಿ ನಾವು ಇಲ್ಲಿ ಕಾನೂನನ್ನು ಮಾಡಿದ್ದೇವೆಯೋ ಹೊರತು ಬೇರೆ ಅನ್ಯಥಾ ಅಲ್ಲ ಯಾರು ಕಾನೂನನ್ನು ರಚನೆ ಮಾಡಿದ್ದರೋ ಕೋರ್ಟ್‌ನಲ್ಲಿ ಅದರ ಇಂಟರ್‌ಪ್ರಿಟೇಷನ್ ಮಾಡುತ್ತಾರೆ, ಹೈಕೋರ್ಟಿನಲ್ಲಿ ಸುಪ್ರೀಂ ಕೋರ್ಟಿನಲ್ಲಿ ಇಂಟರ್‌ಪ್ರಿಟ್ ಮಾಡುತ್ತಾರೆ. ಆದರೆ ಇವತ್ತು ನಾವು ಮಾಡಿದಂಥ ಕಾನೂನನ್ನು ಮುರಿದು ಹಾಕತಕ್ಕಂಥ ಪ್ರಯತ್ನವನ್ನು ಈ ಸದನದಲ್ಲಿ ನಾವು ಮಾಡಿದರೆ ಯಾರು ಈ ಕಾನೂನನ್ನು ರಕ್ಷಣೆ ಮಾಡುತ್ತಾರೆ ? ''ಬೇಲಿಯೇ ಎದ್ದು ಹೊಲ ಮೇಯ್ದಂತೆ'' ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಓದಿ ಮುಂದುವರಿಸುವುದಕ್ಕಿಂತ ಮೊದಲು ಡಿವಿಜನಲ್ ಕಮಿಷನರ್ಸ್ ಏನು ನೋಟೀಸಸ್ ಕಳುಹಿಸಿದ್ದಾರೆ, ರಾಜ್ಯ ಸಭಾ ಮೆಂಬರ್ಸ್‌ಗಳ ವಿಚಾರದಲ್ಲಿ ಇರಬಹುದು. ಕೌನ್ಸಿಲ್ ಸದಸ್ಯರ ವಿಚಾರದಲ್ಲಿ ಇರಬಹುದು. ನ್ಯಾಯಾಂಗದವರು ಕಾನೂನನ್ನು ಇಂಟರ್‌ಪ್ರಿಟೇಷನ್ ಮಾಡುತ್ತಾರೆ. ಅದನ್ನು ಮಾಡುವಾಗ ಡಿವಿಜನಲ್ ಕಮಿಷನರ್ ಏನು ಇಂಟರ್‌ಪ್ರಿಟೇಷನ್ ಮಾಡಿದ್ದಾರೆ ಅದು ವಾಸ್ತವವಾಗಿರುತ್ತದೆಯೋ ? ಎಂದು ನೋಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಆಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಹಿನ್ನೆಲೆಯಲ್ಲಿ ಹೇಳಿ. is assuming so many things.........

ಶ್ರೀ ಎಂ. ವೀರಪ್ಪಮೊಯಿಲಿ.—ಈಗ ನಾನು ಸ್ವಲ್ಪ ಪೂರ್ತಿ ಹೇಳಿದ ಮೇಲೆ ಇಂಟರ್‌ಪ್ರಿಟ್ ಮಾಡಿದ ಮೇಲೆ ಎಲ್ಲರಿಗೂ ಅರ್ಥವಾಗುತ್ತದೆ. ಅರ್ಧ ಇಂಟರ್‌ಪ್ರಿಟ್ ಆಗಿದ್ದರೆ ನಿಮಗೆ ಅರ್ಥ ಆಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜನತಾದವರನ್ನು ಉಳಿಸಿ ಕಾಂಗ್ರೆಸ್‌ನವರನ್ನು ತೆಗೆದಿದ್ದಾರೆ ಅವರ ಹಿನ್ನೆಲೆಯಲ್ಲಿ........

ಶ್ರೀ ಎಂ. ವೀರಪ್ಪ ಮೊಯಿಲಿ.—ಮೆಂಬರ್ ಆಫ್ ಪಾರ್ಲಿಮೆಂಟ್ ಇರತಕ್ಕಂಥದು. ಇದರಲ್ಲಿ Section is very clear. It cannot be split again by a narrower interpretation by the Government. It has got to be liberally interpreted. When it confers certain privileges and rights to Members of Parliament, again restricting it. ಸನ್ಮಾನ್ಯ ಬೊಮ್ಮಾಯಿಯವರು ತಾವು ಕಾನೂನು ಪಂಡಿತರು ಇದ್ದೀರಿ. ಯಾವಾಗ ಫೈನಾನ್ಶಿಯಲ್ ಎನಾಕ್ಟ್‌ಮೆಂಟ್ ಇದ್ದರೆ it has to be strictly read, when it is other than the financial enactment it has to be liberally read. ತಾವು ಓದಿದ್ದೀರಿ. ಇದನ್ನು ಲೋಕಸಭಾ ಮೆಂಬರ್ಸ್ ಎಂದು ಹೇಳತಕ್ಕಂಥ ಒಂದು ನ್ಯಾರೋಯರ್ ಇಂಟರ್‌ಪ್ರಿಟೇಷನ್ ಆಗಿ ಇದು ಅನುಕೂಲಅಸ್ತ್ರ ಆಗುತ್ತ ಇದೆಯೇ ಹೊರತು ಅದರಿಂದ ಯಾವ ಒಂದು ಲಾಭವನ್ನು ಪಡೆದಿಲ್ಲ. ಜನತಾ ರಾಜ್ಯಸಭಾ ಮೆಂಬರ್ಸ್ ಬಿಟ್ಟಿದ್ದೇವೆ, ಕಾಂಗ್ರೆಸ್ ರಾಜ್ಯಸಭಾನವರು ಬಿಟ್ಟಿದ್ದೇವೆ ಎಂದು ಹೇಳಲಿಕ್ಕೆ ಪ್ರಯತ್ನವನ್ನು ದಯಮಾಡಿ ಮಾಡುವುದಕ್ಕೆ ಹೋಗಬೇಡಿ. ಹಾಗಾದರೆ ಅದರಲ್ಲಿ ಲೋಕಸಭಾ ಮೆಂಬರ್ಸ್‌ನ್ನು ಸೇರಿಸಿಕೊಂಡ ಹಾಗೆ ರಾಜ್ಯಸಭಾ ಮೆಂಬರ್ಸ್‌ನ್ನೂ ಇನ್‌ಕ್ಲೂಡ್ ಮಾಡಬಹುದಾಗಿತ್ತಲ್ಲವೆ ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಇವರು ಕ್ಷೇತ್ರಗಳನ್ನು ಗುರುತಿಸುವಾಗ ಇವರೇ ಆರಿಸಿಕೊಂಡುಬರುವ ಹಾಗೆ ಗುರುತು ಮಾಡಿಕೊಂಡಿದ್ದಾರೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಶ್ರೀಮಾನ್ ಬೊಮ್ಮಾಯಿ ಮತ್ತು ಧರ್ಮಸಿಂಗ್ ಇವರೆಲ್ಲಾ ಹೇಳುವುದು ಅದು ಪೊಲಿಟಿಕಲ್ ಆರ್ಗ್ಯುಮೆಂಟ್ ಆಗುತ್ತದೆ. ಇಬ್ಬರನ್ನೂ ಸೇರಿಸಿಲ್ಲ ಎಂದು ಹೇಳುತ್ತಾರೆ. ತಮಗೆ ಅನುಕೂಲತೆ ಆಗುವ ಹಾಗೆ ಇದ್ದರೆ ಅಂಥಾವರನ್ನು ಸೇರಿಸಿಕೊಳ್ಳುತ್ತಾರೆ. ಇಲ್ಲದೇ ಹೋದರೆ ಸೇರಿಸಿಕೊಳ್ಳುವುದಿಲ್ಲ ನಾನು ಪೊಲಿಟಿಕಲ್ ಆರ್ಗ್ಯುಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ. What I am concerned is, most sincere exposition of law which has been passed by this House. We cannot be dishonest as law makers. We cannot expect from people outside or in the court honest Interpretation when we have no honesty. How can we expect honesty form others. If you are honest you must interpret. We don't want to become dishonest interpreters of law. Politically it is inconvenient to them to include the Rajaya Sabha Members. ...ಈ ಕೆಲಸವನ್ನು ಸರ್ಕಾರದವರು ಮಾಡಬಾರದು. ನೀವೂ ಕೂಡ ಮಾಡಬಾರದು ಯಾವ ಕೆಲಸವನ್ನೇ ಮಾಡಬೇಕಾದರೂ ಪ್ರಾಮಾಣಿಕತೆಯಿಂದ ಮಾಡಬೇಕು. ಯಾರೇ ಬರಲಿ, ಪ್ರಾಮಾಣಿಕವಾಗಿ ಬರಲಿ. ಇದರಲ್ಲಿ ನೀವು ರಾಜ್ಯಸಭಾ ಮೆಂಬರ್ಸ್‌ನ್ನು ಏತಕ್ಕೆ ಬಿಟ್ಟಿರಿ ?

ಅಧ್ಯಕ್ಷರು.—ಅವರು ಎಂ.ಪಿ. ಅಂದಿದ್ದಾರೆ ಎಂ. ಪಿ. ಅಂದರೆ ಇಬ್ಬರೂ ಸೇರಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಇನ್‌ಕ್ಲೂಡಿಂಗ್ ರಾಜ್ಯಸಭಾ ಮೆಂಬರ್ ಎನ್ನಬೇಕಾಗಿತ್ತು. ಹಾಗೆ ಹೇಳಲಿಲ್ಲ, ಅವರನ್ನು ಹೊರಗೆ ಇಟ್ಟಿದ್ದಾರೆ. ಆದುದರಿಂದ ನಾನು ಈ ಒಂದು ನಿಲುವಳಿ ಸೂಚನೆ ಕೊಟ್ಟಿದ್ದೇನೆ. ತಾವು ಈ ಒಂದು ನಿಲುವಳಿ ಸೂಚನೆಯ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುವುದಾದರೆ ಅದನ್ನು ಪ್ರೂವ್ ಮಾಡುತ್ತೇನೆ, ಇದರ ಬಗ್ಗೆ ಗಂಟೆಗಟ್ಟಲೆ ಮಾತನಾಡುತ್ತೇನೆ. ಇದರ ಬಗ್ಗೆ A to Z I will prove how they are going to lose many Zilla Parishads. We are going to prove and we will prove that. They will be depressed from the power if they include Rajaya Sabha Members. ಇದರ ಬಗ್ಗೆ ತಾವು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದೀರಿ. by hook or crook you want to capture many Zilla Parishads by this method. 'representing a part or whole of the district whose constituencies lie within the jurisdiction of the Zilla Parishad' ಎಂದು ಹೇಳಿದಿರಿ. ಇದಕ್ಕೆ ಜನ ಉತ್ತರ ಕೊಡುತ್ತಾರೆ. ಇದು ಒಂದು ಭಾಗ.

ಇನ್ನೊಂದು ಭಾಗ ಏನು ಎಂದರೆ ಜಿಲ್ಲಾ ಪರಿಷತ್‌ನಲ್ಲಿ ಅವರನ್ನು ಅಂದರೆ ಮೆಂಬರ್ಸ್ ಆಫ್ ಪಾರ್ಲಿಮೆಂಟ್ ಅವರನ್ನು ರೆಪ್ರೆಸೆಟಿಟೀವ್ ಆಗಿ ಇಟ್ಟಿರುವುದು.

ಶ್ರೀ ಬಿ. ಜಿ. ಕೊಟ್ರಪ್ಪ.—ಅಧ್ಯಕ್ಷರೇ, ಇದು ಮಿಸ್ ಇಂಟರ್‌ಪ್ರೆಷನ್ ಆಗುತ್ತದೆ. ತಾವು ಇದನ್ನು ಅಲೋ ಮಾಡಬಾರದು.

SRI M. VEERAPPA MOILY.—ಮಾನ್ಯ ಅಧ್ಯಕ್ಷರೆ, Members of the State Legislative Council not elected from territorial constituencies ordinarily resident in the district shall be entitled to take part in the proceedings of and to vote at the meeting of the Zilla Parishad ಇದು ಏನು ಅರ್ಥ ಎನ್ನುವುದನ್ನು ತಾವೇ ಹೇಳಿ ? at the time of nomination he has give some address ಮಾನ್ಯ ಗುಂಡಯ್ಯ ಕೊಟ್ಟರು he must be a ordinary resident of the district. How can he become a ordinary resident of Bidar District or Gulbarga District,

ಶ್ರೀ ಧರ್ಮಸಿಂಗ್.—ಅವರು ಬೆಂಗಳೂರಿನಲ್ಲಿ ಬಸವನಗುಡಿಯಲ್ಲಿ ನಿಂತರೆ ವೋಟು ಸಿಕ್ಕುತ್ತದೆ. ಅದು ಬಿಟ್ಟು ಗುಲ್ಬರ್ಗ ಡಿಸ್ಟ್ರಿಕ್ಟ್‌ನಲ್ಲೋ ಬೀದರ್ ಡಿಸ್ಟ್ರಿಕ್ಟ್‌ನಲ್ಲೋ ನಿಂತರೆ ಆ ಜನರು ಇವರಿಗೆ ವೋಟು ಹಾಕುತ್ತಾರೆಯೇ ?

ಅಧ್ಯಕ್ಷರು.—ತಾವು ಬೇಗನೆ ಮುಕ್ತಾಯ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದಕ್ಕಿಂತ ಇನ್ನು ದೊಡ್ಡ ಫ್ರಾಡ್ ಬೇಕೇ ? ಬಹುಶಃ ಇದಕ್ಕೆ ನಮ್ಮ ಕಾನೂನು ಪರ್ಮಿಟ್ ಮಾಡುವುದಿಲ್ಲ. ಆದರೆ this Government should be prosecuted under Section 420 of the IPC. They are fit to be prosecuted. ಇದಕ್ಕಿಂತ ಮತ್ತೊಂದು ಬೇರೆ ಅಪರಾಧವಿಲ್ಲ.

೨-೦೦ ಪಿ. ಎಂ.

Legislative council members who are not elected from any territorial jurisdiction like local bodies, teachers constituency etc., ಇಲ್ಲಿ ಲೋಕಲ್ ಬಾಡೀಸ್, ಪದವೀಧರರ ಕ್ಷೇತ್ರ, ಉಪಾಧ್ಯಾಯರ ಕ್ಷೇತ್ರ ಎಂದು ಮಾಡಿದ ಮೇಲೆ ಈ ಕ್ಷೇತ್ರಗಳಿಂದ ಆರಿಸಿ ಬಂದಿರುವ ಸದಸ್ಯರಿಗೂ ಮತ್ತು ರಾಜ್ಯಸಭಾ ಸದಸ್ಯರಿಗೂ ಏನು ವ್ಯತ್ಯಾಸವಿದೆ ? ಆದರೂ ವಿಧಾನಪರಿಷತ್ತಿನ ಸದಸ್ಯರಿಗೆ ಅಧಿಕಾರ ಇದೆ, ರಾಜ್ಯಸಭಾ ಸದಸ್ಯರಿಗೆ ಅಧಿಕಾರ ಇದೆ, ರಾಜ್ಯಸಭಾ ಸದಸ್ಯರಿಗೆ ಅಧಿಕಾರ ಇಲ್ಲ ಎಂದು ಇವರು ಹೇಳುತ್ತಿರುವುದು ಸರಿಯೆ ? Rajya Sabha Members are also elected from the jurisdiction of the Assembly Constituency. ಆದ್ದರಿಂದ ಇವರಿಗೂ ಸಹ ಮತ ಚಲಾಯಿಸುವ ಅಧಿಕಾರ ಇರಬೇಕು. ರಾಜ್ಯ ಸಭಾ ಸದಸ್ಯರು ಅವರು ವಾಸವಾಗಿರುವ ಕಡೆಗಳಲ್ಲಿ ಮತ ಚಲಾಯಿಸುವ ಅಧಿಕಾರವನ್ನು ವಿಧಾನಪರಿಷತ್ ಸದಸ್ಯರಿಗೆ ಕೊಟ್ಟಿರುವಂತೆ ಕೊಡಬೇಕು. ಇಲ್ಲಿ ರಾಜ್ಯಸಭಾ ಸದಸ್ಯರನ್ನು ಕೈಬಿಟ್ಟಿರುವುದು ಸರಿಯಲ್ಲ. Is it not a discrepency ?

ಅಧ್ಯಕ್ಷರು.—ಇದೇ ವಿಚಾರವನ್ನು ಈಗಾಗಲೇ ಮೂರು ಜನ ಸದಸ್ಯರು ಹೇಳಿದ್ದಾರೆ, ಆದ್ದರಿಂದ ಸರ್ಕಾರದವರು ಉತ್ತರ ಕೊಡಲು ಅವಕಾಶ ಮಾಡಿಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲಿ ಪೂರ್ತಿಯಾಗಿ ಅಧಿಕಾರ ಉಲ್ಲಂಘನೆ ಆಗಿದೆ. ಇವರು ಯಾವ ಒಂದು ಪ್ರಜಾಪ್ರಭುತ್ವದ ಪರಂಪರೆಯನ್ನು ಉಳಿಸಿಕೊಂಡು ಮತ್ತು ಬೆಳೆಸಿ ಕೊಂಡು ಹೋಗ ಬೇಕೆಂದು ಹೇಳುತ್ತಿದ್ದಾರೋ ಅದು ಇವರಿಂದ ಯಾವ ರೀತಿ ಸಾಧ್ಯವಾಗುತ್ತದೆ ? ಎಲ್ಲಾ ಕಡೆಯೂ ಇವರೇ ಅಧಿಕಾರಕ್ಕೆ ಬರಬೇಕೆಂದು ಈ ರೀತಿ ಮಾಡಿದ್ದಾರೆ. ಮತ್ತೆ ಮಂಡಲ ಪಂಚಾಯತ್ ಪ್ರಧಾನ ಮತ್ತು ಉಪಪ್ರಧಾನರ ಚುನಾವಣೆ ಸಂಬಂಧದಲ್ಲಿಯೂ ಸಹ ಇವರು ಪ್ರಜಾಪ್ರಭುತ್ವ ಪದ್ಧತಿಯನ್ನು ತುಳಿಯತಕ್ಕ ನೀತಿಯನ್ನು ಅನುಸರಿಸಬಾರದು. ಪ್ರಜಾಪ್ರಭುತ್ವ ಪದ್ಧತಿಯನ್ನು ಉಳಿಸುವ ನೀತಿಯನ್ನು ಅನುಸರಿಸುವಂತಿರಬೇಕು. Section 5 gives some powers for nomination. Section 5 sub clause 3 says:

> "Where no person belonging to backward classes is elected to mandal Panchayat, The zilla Parishad shall nominate two persons belonging to the said backward classes to the Mandal Panchayat."

This clause becomes invalid due to the policy decision taken by the Government. ಮಾನ್ಯ ಮುಖ್ಯಮಂತ್ರಿಗಳ ಆಶೀರ್ವಾದದಿಂದ ಈಗ ಎಲ್ಲರೂ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ. ಈ ಕಾರಣದಿಂದ ಈಗ ಪ್ರತಿ ಮಂಡಲ ಪಂಚಾಯಿತಿಯಲ್ಲಿಯೂ ಹಿಂದುಳಿದ ವರ್ಗದವರು ಇದ್ದೇ ಇರುತ್ತಾರೆ. ಆದರೂ ಹಿಂದುಳಿದ ವರ್ಗಕ್ಕೆ ಸೇರಿದವರನ್ನು ಮತ್ತು ಕುಶಲಕರ್ಮಿಗಳನ್ನು ನಾಮಿನೇಟೆಡ್ ಲಿಸ್ಟ್‌ನಲ್ಲಿ ಸೇರಿಸಬೇಕೆಂದು ಇವರ ಪಕ್ಷದವರು ತೀರ್ಮಾನ ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು.—ಮೊದಲು ಸರ್ಕಾರದವರು ಉತ್ತರ ಕೊಡಲಿ. ನಂತರ ಬೇಕಾದರೆ ಇದನ್ನೆಲ್ಲಾ ತಾವು ಹೇಳಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಆ ರೀತಿ ಹೇಳಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಆ ರೀತಿ ಹೇಳದಿದ್ದರೆ ಮತ್ತೇ ಯಾರನ್ನು ನಾಮಕರಣ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನು ಪ್ರಕಾರ ಇತಹವರನ್ನು ನಾಮಕರಣ ಮಾಡಲು ಅವಕಾಶವಿದ್ದರೆ. ಮಾಡುತ್ತಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದ ಬೊಮ್ಮಾಯಿ ಅವರು ಕಾನೂನು ಪ್ರಕಾರ ಹಿಂದುಳಿದ ವರ್ಗದವರನ್ನು ನಾಮಕರಣ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. We will give up that issue. Only the first issue remains to be discussed. ಈಗ ನಾವು ಏನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ, ಅದರ ಮೇಲೆ ಚರ್ಚೆ ಮಾಡಲು ಅವಕಾಶ ಕೊಡುತ್ತೀರೆಂದು ನಾನು ನಂಬಿದ್ದೇನೆ. ನಿಯಮ ೬೩(೨)ರ ಪ್ರಕಾರ ನಾವು ೨೩ ಜನ ಸದಸ್ಯರು ಈ ಬಗ್ಗೆ ಆಕ್ಷೇಪ ಎತ್ತಿದರೆ ನೀವು ಇದನ್ನು ಚರ್ಚೆ ಮಾಡಲು ಅನುಮತಿಕೊಡಲೇ ಬೇಕಾಗುತ್ತದೆ. ಆದರೆ ಅಲ್ಲಿಯವರೆಗೆ ನಾವು ಹೋಗಲು ತಾವು ಅವಕಾಶ ಕೊಡದೆ ಇದನ್ನು ತಾವು ಒಪ್ಪಿಕೊಂಡು ಇದರ ಮೇಲೆ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ರೂಲ್ ೬೩(೨) ಪ್ರಕಾರ ನಿಮ್ಮ ಅಧಿಕಾರ ಇಲ್ಲಿ ಚಲಾಯಿಸಿ ಇಲ್ಲಿ ನಿಲುವಳಿ ಸೂಚನೆ ತರತಕ್ಕಂಥ ಒಂದು ಪ್ರಸಂಗಕ್ಕೆ ಅವಕಾಶ ಕೊಡಬಾರದು ಎಂದು ತಮ್ಮ ಮುಖಾಂತರ ನಮ್ಮ ಟ್ರೆಷರಿ ಬೆಂಚನವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ ಆದುದರಿಂದ ಇವತ್ತು ಪಾಪ ಗುಂಡಯ್ಯ ಶೆಟ್ಟರು ಅಂತಹವರನ್ನು ಬಲಿಪಶುಗಳಾಗಿ ಏಕೆ ಮಾಡುತ್ತೀರಿ ? ಇಂತಹವರನ್ನು ಬಲಿಪಶು ಮಾಡುವಂಥ ಪ್ರಸಂಗಕ್ಕೆ ಏಕೆ ಇಳಿದಿದ್ದೀರೋ ನನಗಂತೂ ಅರ್ಥವಾಗುತ್ತಿಲ್ಲ. ಪಾಪ ಸನ್ಮಾನ್ಯ ರಾಮಕೃಷ್ಣಹೆಗಡೆಯವರು ಇಡೀ ದೇಶದ ದೊಡ್ಡ ದೊಡ್ಡ ಕವಿಗಳನ್ನು ಕರೆಯಿಸಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ದೊಡ್ಡ ಸಮ್ಮೇಳನ ಮಾಡುತ್ತಾ ಇದ್ದಾರೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಇವತ್ತು ನ್ಯಾಷನಲ್ ಇಮೇಜ್ ಕೊಡಬೇಕು ಎಂದು ಮಾಡುವಾಗ ಅವರ ನ್ಯಾಷನಲ್ ಇಮೇಜನ್ನು ಹಾಳು ಮಾಡುವುದಕ್ಕೆ, ಪ್ರಜಾಪ್ರಭುತ್ವವನ್ನು ತುಳಿಯುವುದಕ್ಕೆ ಪ್ರಯತ್ನ ಮಾಡಬೇಡಿ. ಅದಕ್ಕೆ ಅವಕಾಶ ಕೊಡಬೇಡಿ. ದೊಡ್ಡ ಸಮ್ಮೇಳನ ಮಾಡಿದಿರಿ. ಸನ್ಮಾನ್ಯ ಮುಖ್ಯ ಮಂತ್ರಿಯವರನ್ನು ಕೈಬಿಡಬೇಡಿ. ಗ್ರೇಸ್‌ಫುಲ್ಲಾಗಿ ಹೋಗಿರಿ ಅವರನ್ನು ಕಳಿಸಬೇಕಾದರೆ ಮರ್ಯಾದೆಯಾಗಿ ಕಳುಹಿಸಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಸಭಾಧ್ಯಕ್ಷರೇ ೧೭೦ನೇ ನಿಯಮದ ಪ್ರಕಾರ ಅದರ ೨ (ಎ) ಅನ್ನು ಮಾತ್ರ ಓದುತ್ತೇನೆ.

> "The date of the first meeting of the Z. P. after the first re-consitution shall be fixed by the Commissiner".

Commissioner has been defined as Divisional Commissioner.

"Who shall preside such meetings and the date of the subsequent meeting shall be fixed in the previous meetings"......

ಫಸ್ಟ್ ಮೀಟಿಂಗ್ ಕರೆಯತಕ್ಕವರು ಡಿವಿಜನಲ್ ಕಮಿಷನರ್ ಈ ಶಾಸನದ ಪ್ರಕಾರ ಫಸ್ಟ್ ಮೀಟಿಂಗಿಗೆ ನೋಟೀಸ್ ಕಳಿಸಬೇಕು. ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ ಮಾಡ ತಕ್ಕಂಥಾದ್ದಕ್ಕೆ ಒಂದು ನೋಟೀಸನ್ನು ಕಳುಹಿಸಬೇಕು. ಈ ನೋಟೀಸನ್ನು ಕಳಿಸಬೇಕಾದರೆ, ಆ ಸಭೆಗೆ ಬರತಕ್ಕವರು ಯಾರು ಅರ್ಹರು ಎನ್ನುವುದು ೧೩೯ (೩)ನೇ ವಿಧಿಯಲ್ಲಿದೆ. ಯಾರು ಯಾರು ಅರ್ಹರು ಎಂದರೆ ಸೆಕ್ಷನ್ ೧೪೦ರ ಪ್ರಕಾರ ನೇರವಾಗಿ ಚುನಾಯಿತರಾದ ಸದಸ್ಯರು, ಎರಡನೆಯ ವರ್ಗದವರು ಎಂದರೆ, ಆ ಭಾಗದ ಸಹಕಾರ ಬ್ಯಾಂಕಿನ ಅಧ್ಯಕ್ಷರು ಅವರು ಭಾಗವಹಿಸ ಬಹುದು, ಆದರೆ ಓಟ್ ಮಾಡುವ ಹಕ್ಕಿಲ್ಲ. ನಿಯಮ ೩(ಎ) ಬಗ್ಗೆ ಸ್ವಲ್ಪ ಮನಸ್ಸಿನಲ್ಲಿ ಗೊಂದಲ ಇದೆ. ಮಾನ್ಯ ವಿರಪ್ಪ ಮೊಯಿಲಿಯವರು ಅತ್ಯಂತ ಚೆನ್ನಾಗಿ ಲಾಯರ್‌ಗಿರಿ ಕೆಲಸವನ್ನು ಮಾಡಿದ್ದಾರೆ. ಬಹಳ ದೊಡ್ಡ ಪದಗಳನ್ನು ಉಪಯೋಗಿಸಿದ್ದಾರೆ. ತಂತ್ರದ ಬಗ್ಗೆ ಎಲ್ಲಾ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ತಮಗೆ ಜ್ಞಾಪಕ ಮಾಡುತ್ತೇನೆ. ಈ ಒಂದು ಸದನದಲ್ಲಿ ಈ ಶಾಸನದ ಬಗ್ಗೆ ಚರ್ಚೆ ಮಾಡುವಾಗ ಹತ್ತಾರು ತಿದ್ದುಪಡಿಗಳನ್ನು ಸದನದ ಮುಂದೆ ಇಟ್ಟಿರಿ. ಏಕೆಂದರೆ, ತ್ರಿಕಾಲಜ್ಞಾನ ನಿಮ್ಮ ಪಕ್ಷಕ್ಕೆ ಬಹಳ ಜಾಸ್ತಿ ಇದೆ. ಜನತಾಗೆ ಎಷ್ಟು ಲಾಭಸಿಗಬಹುದು, ಕಾಂಗ್ರೆಸ್‌ಗೆ ಎಷ್ಟು ಲಾಭ ಸಿಗಬಹುದು ಎನ್ನುವುದರ ಬಗ್ಗೆ ತ್ರಿಕಾಲಜ್ಞಾನ ಇತ್ತು. ಹತ್ತಾರು ತಿದುಪಡಿಗಳನ್ನು ಸಭೆಯ ಮುಂದೆ ಇಟ್ಟಿರಿ. ಸೆಕ್ಷನ್ ೧೩೯ (ಎ) ಏನಿದೆ ಅದರ ಬಗ್ಗೆ ಯಾವ ತಿದ್ದುಪಡಿಯೂ ಇಲ್ಲ. ಸೆಕ್ಷನ್ ೧೩೯ (ಎ) ನಲ್ಲಿ ಯಾವ ಯಾವ ಸದಸ್ಯರು ಇರಬೇಕು, ಹೇಗೆ ಇರಬೇಕು ಎನ್ನುವುದರ ಬಗ್ಗೆ ಉದ್ದೇಶವನ್ನು ಹೇಳಿದೆ. ಆ ಉದ್ದೇಶಕ್ಕೆ ಅನುಗುಣವಾಗಿ ಯಾವ ತಿದ್ದುಪಡಿಯೂ ಇರಲಿಲ್ಲ, ಬೇಕಾದರೆ ದಾಖಲೆ ನೋಡಬಹುದು. ಏಕೆಂದರೆ ವಿಲ್ ಅಫ್ ದಿ ಲೆಜಿಸ್ಲೇಚರ್ ಏನಿದೆ ಅದರ ಬಗ್ಗೆ ಬಹಳಮಟ್ಟಿಗೆ ಹೇಳಿದ್ದಾರೆ. If the will of the legislature that was so, what was he doing on that day ? ಅದು ಬೇರೆ ವಿಚಾರ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಗುಂಡಯ್ಯಶೆಟ್ಟರಿಗೆ ಗುಲ್ಬರ್ಗಕ್ಕೆ ಹಾಕಿದ್ದೀರಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಗುಂಡಯ್ಯಶೆಟ್ಟಿಯವರು, ಎಂ. ಎಸ್. ಕೃಷ್ಣನ್ ಅವರದು, ಭೂಪತಿಯವರದು ಹೇಳುತ್ತೇನೆ ನಾನು ಹೇಳುವುದನ್ನು ಪೂರ್ಣವಾಗಿ ಕೇಳಿ.

(ಗೊಂದಲ)

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ......I will not allow anybody.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮಿಂದ ಹೇಳಿಸಿಕೊಳ್ಳುವಂತಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಸಭಾಧ್ಯಕ್ಷರೆ, ಈ ಸದನದಲ್ಲಿ ಯಾರು ಯಾರಿಗೆ ಹಕ್ಕು ಇರಬೇಕೆಂದು ಶಾಸನ ಮಾಡಿದೆ ಅದು ಈ ರೀತಿ ಇದೆ.

"Subject to provisions of Clause (b), the Members of the State Legislative Assembly and the State Legislative Council...We have defined here the Members of the State Legislature includes the Assembly and the Council Members. It is a well-established Constitutional provision."

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಮಸೂದೆಯಲ್ಲಿ.........

ಅಧ್ಯಕ್ಷರು.—ತಾವು ಕೋರ್ಟಿನಲ್ಲಿ ಹೀಗೆ ಆರ್ಗ್ಯುಮೆಂಟ್ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಇಲ್ಲಿ ಜನತಾ ಪಕ್ಷದ ಲಾಭಕ್ಕಾಗಿ ರಾಜಕೀಯ ಮಾಡುತ್ತಿಲ್ಲ. ಸದನದಲ್ಲಿ ಶಾಸನ ಮಾಡಿರುವುದನ್ನು ನಾನು ಓದಿ ಹೇಳುತ್ತಿದ್ದೇನೆ. ಶಾಸನದ ಉದ್ದೇಶ ಏನಿದೆ ಅದರ ಪ್ರಕಾರ ನಾವು ಕೆಲಸ ಮಾಡಬೇಕಾಗಿದೆ.

"We have decided and defined here about the Members of State Legislative Assembly and the Council and Members of Parliament, we have not defined. It says :"

"...Member of parliament representing a part or whole of the district whose constituencies lie within the jurisdiction of the Zilla Parishad."

ಜಿಲ್ಲೆಯ ಯಾವ ಪಾರ್ಲಿಮೆಂಟ್ ಕ್ಷೇತ್ರದಿಂದ ಚುನಾಯಿತರಾಗಿರತಕ್ಕ ಸದಸ್ಯರು ಇರುತ್ತಾರೆ ಅತನ ಕ್ಷೇತ್ರ ಆ ಕ್ಷೇತ್ರ ಎಲ್ಲಿಯುವರೆಗೆ ಜಿಲ್ಲಾಪರಿಷತ್ತಿನ ಪರಿಮಿತಿಯೊಳಗೆ ಬರುತ್ತದೆ, ಮೂರು ಗ್ರಾಮ ಗಳು ಇರಬಹುದು ೬೦೦ ಗ್ರಾಮಗಳು ಇರಬಹುದು. ಅಲ್ಲಿ ಚುನಾಯಿತನಾದಂಥ ಸದಸ್ಯನಿಗೆ ಮತ ದಾನದ ಹಕ್ಕು ಕೊಡಬೇಕೆಂಬುದು ಶಾಸನದ ಉದ್ದೇಶ. ಪಾರ್ಲಿಮೆಂಟ್ ಎಂದರೆ ಏನು ?

"There shall be a Parliament for the Union which shall consists of the President two Houses to be known respectively as the Council of States and the Houses of people."

ಎರಡೂ ಮನೆಯಲ್ಲಿರತಕ್ಕ ಸದಸ್ಯರುಗಳಿಗೆ ಅನ್ವಯುವಾಗುತ್ತದೆ ಇದನ್ನು ಯಾವ ರೀತಿ ಕರೆಯು ಬೇಕೆಂಬುದು ನಿಮ್ಮ ವಾದದ ತಿರುಳು.

ಶ್ರೀ ಎಂ. ವೀರಪ್ಪಮೊಯ್ಲಿ.—ಹೌದು.

SRI ABDUL NASIR SAB.—It Reads: "The allocation of seats in the Council of States to be filled by the representatives of the States and the Union territories shall be in accordance with the provisions in that behalf contained in the IVth Schedule."

೪ನೇ ಷೆಡ್ಯೂಲ್ ಏನು ಹೇಳುತ್ತದೆಂದರೆ, ರಾಜ್ಯ ಸಭೆಗೆ ಕ್ಷೇತ್ರಗಳ ವಿಂಗಡಣೆ ಮಾಡುವುದಿಲ್ಲ. ರಾಜ್ಯಸಭೆಗೆ ರಾಜ್ಯಗಳಿಂದ ಇಷ್ಟಿಷ್ಟು ಜನ ಚುನಾಯಿತರಾಗಬೆಕೆಂದು ನಾಲ್ಕನೇ ಷೆಡ್ಯೂಲ್‌ನಲ್ಲಿ ಫಿಕ್ಸ್ ಮಾಡಿದ್ದಾರೆ. ಇದು ರಾಜ್ಯಾಂಗದಲ್ಲಿ ಹೇಳಿರುವುದು ಜನತಾ ಪಕ್ಷದವರು ಬರೆದುಕೊಂಡು ಬಂದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ತಮಗೆ ರಾಜ್ಯಾಂಗ ಬರೆಯುವುದಕ್ಕೆ ಅಧಿಕಾರ ಕೊಟ್ಟಿದ್ದರೆ ಏನೇನು ಆಗುತ್ತಿತ್ತೋ ?

ಶ್ರೀ ಎಸ್. ಬಂಗಾರಪ್ಪ.—ರಾಜ್ಯಾಂಗ ಬರೆದಿಟ್ಟಿದ್ದಾರೆ, ನೀವು ಕರೆಕ್ಟಾಗಿ ಓದಿಬಿಟ್ಟರೆ ಸಾಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ನನಗಿರುವ ಅಲ್ಪಜ್ಞಾನದಲ್ಲಿ ಗೊತ್ತಿರುವಷ್ಟು ಓದಿದ್ದೇನೆ. ನಾನು ನಿಮ್ಮಷ್ಟು ಪ್ರಾಜ್ಞನಲ್ಲ.

It reads : "Each State shall be devided into territorial Constituencies in such a manner that the ratio between-the population of each Constituency and the number of seats alloited to it is as for as practicable the same throughout the State."

ಈ ರಾಜ್ಯಾಂಗದ ಪ್ರಕಾರ ರಾಜ್ಯಸಭಾ ಸದಸ್ಯರು ಮತ್ತು ಲೋಕಸಭಾ ಸದಸ್ಯರು ಇವರುಗಳ ಬಗ್ಗೆ ನಿರ್ಣಯ ಹೇಳಿದ್ದಾರೆ. ರಾಜ್ಯಸಭೆ ಸದಸ್ಯರನ್ನು ಚುನಾವಣೆ ಮಾಡತಕ್ಕದ್ದು ರಾಜ್ಯಸಭಾಸದಸ್ಯ ರಿಗೆ ಯಾವುದೇ ಒಂದು ಕ್ಷೇತ್ರ ವಿಂಗಡಣೆ ಮಾಡದೇ ೪ನೇ ಷೆಡ್ಯೂಲ್‌ಗೆ ಅನುಗುಣವಾಗಿ ಇಷ್ಟಿಷ್ಟು ಎಂದು ನಿರ್ಣಯ ಮಾಡಿದ್ದಾರೆ. ಲೋಕಸಭಾ ಸದಸ್ಯರಿಗೂ ಟೆರಿಟೋರಿಯಲ್ ಡಿವಿಜನ್ ಮಾಡಿ ಸಾಮಾನ್ಯವಾಗಿ ಸ್ವಲ್ಪ ಹೆಚ್ಚು ಕಡಿಮೆ ಮತದಾರರ ಆಧಾರದ ಮೇಲೆ ಚುನಾವಣೆ ಮಾಡಬೇಕೆಂದು ಅಭಿಪ್ರಾಯ ರಾಜ್ಯಾಂಗದಲ್ಲಿ ನಿರ್ಮಾಣವಾಗಿದೆ. ನಮ್ಮ ಶಾಸನದಲ್ಲಿ ಏನು ಹೇಳಿದ್ದೇವೆ, ವಿಧಾನ

ಮಂಡಲದ ಸದಸ್ಯರು ಎನ್ನುವ ಬದಲಾಗಿ ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು ಎಂದು ಹೇಳಿದ್ದೇವೆ. ಚುನಾವಣೆಯ ಹಕ್ಕನ್ನು ಯಾರು ಯಾರಿಗೆ ಕೊಡಬೇಕೆಂದು ಸಹ ಹೇಳಿದ್ದೇವೆ. ರಾಜ್ಯಸಭಾ ಸದಸ್ಯರಿಗೆ ನಾವು ಅಲ್ಲಿ ಏನು ಮಾಡಿದ್ದೇವೆ ಎನ್ನುವುದನ್ನು ಸಹ ಹೇಳಿದ್ದೇವೆ. ಮೆಂಬರ್ ಆಫ್ ಪಾರ್ಲಿಮೆಂಟ್ ಯಾವ ಕ್ಷೇತ್ರದಿಂದ ಚುನಾವಣೆ ಆಗುತ್ತದೆ ಅಲ್ಲಿ ಜಿಲ್ಲಾ ಪರಿಷತ್ತಿನ ಅಲ್ಪಭಾಗ ಸೇರಬಹುದು. ಅವರಿಗೂ ಸಹ ಮತದಾನದ ಹಕ್ಕು ಕೊಡಬೇಕೆಂದು ಈ ಶಾಸನದ ಮತ್ತು ಈ ಕಲಂನ ಉದ್ದೇಶ. ಇನ್ನು ಮೇಲ್ಮನೆಯ ಸದಸ್ಯರ ಬಗ್ಗೆ ಹೇಳಬೇಕೆಂದರೆ, ಅಲ್ಲಿ ಎರಡು ವಿಧ ಇರುತ್ತದೆ. ಯಾವ ಸದಸ್ಯರಿಗೆ ಕ್ಷೇತ್ರವಾರು ಇರುತ್ತದೆ, ಟೆರಿಟೋರಿಯಲ್ ಕಾನ್‌ಸ್ಟಿಟ್ಯೂಯೆನ್ಸಿ ಎಲ್ಲೆಲ್ಲಿ ಬರುತ್ತದೆ, ಅಲ್ಲಿ ಅವರಿಗೆ ಮತದಾನದ ಹಕ್ಕು ಇರುತ್ತದೆ. ಆರ್ಡಿನರಿ ರೆಸಿಡೆಂಟ್ಸ್ ಅಂದರೆ ಅವರಿಗೆ ಆಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಎಲ್ಲಿದೆ ಆ ರೀತಿ ಹೇಳಿ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಸ್ವಾಮಿ, ೧೩೯ನ್ನು ಓದಿ ನೋಡಿ.

Section 139(3) (a) reads thus "......and the members of the State Legislative Council not elected from territorial constituencies ordinarily resident in the district shall be entitled to take part in the proceedings of and to vote at the meetings of the Zilla parishad."

ರಾಜ್ಯಸಭೆ ವಿಚಾರದ ಬಗ್ಗೆ ಮೊದಲೇ ಹೇಳಿದ್ದೇನೆ. ಇನ್ನು ಕೌನ್ಸಿಲ್‌ಗೆ ಬಂದಾಗ ಎರಡು ಭಾಗ ಬರುತ್ತದೆ. ಈಗ ಪರಿಷತ್ತಿನಲ್ಲಿ ಯಾರಿಗೆ ಕ್ಷೇತ್ರಗಳು ಇದೆ ಗ್ರ್ಯಾಜ್ಯುಯೇಟ್ಸ್ ಕಾನ್‌ಸ್ಟಿಟ್ಯೂಯೆನ್ಸಿ ಇದೆ, ಟೀಚರ್ಸ್ ಕಾನ್‌ಸ್ಟಿಟ್ಯೂಯೆನ್ಸಿ ಇದೆ ಲೋಕಲ್ ಬಾಡಿ ಕಾನ್‌ಸ್ಟಿಟ್ಯುಯೆನ್ಸಿ ಇದೆ. ಅವರೆಲ್ಲರಿಗೂ ಎಲ್ಲಾ ಕ್ಷೇತ್ರಗಳಲ್ಲಿ ಮತದಾನ, ಮಾಡಲಿಕ್ಕೆ ಕೊಡಬೇಕೆಂದು ಶಾಸನದಲ್ಲಿ ಇದೆ. ಆದೇ ಯಾರಿಗೆ ಕ್ಷೇತ್ರ ಇಲ್ಲ, ಅಸೆಂಬ್ಲಿಯಿಂದ ಚುನಾವಣೆಯಾಗಿದ್ದರೆ, ಅಥವ ನಾಮಿನೇಟ್ ಆಗಿದ್ದರೆ ಅವರು ಅ ಜಿಲ್ಲೆಯಲ್ಲಿ ಅಲ್ಲಿ ಸಾಧಾರಣ ವಾಸ ಇದ್ದರೆ ಆ ಜಿಲ್ಲೆಯಲ್ಲಿ ಮತದಾನದ ಹಕ್ಕು ಉಂಟು. ಇದು ಶಾಸನದ ಉದ್ದೇಶ.

(ಗೊಂದಲ)

ಇನ್ನು ಯಾರು ಯಾರು ಆರ್ಡಿನರಿ ರೆಸಿಡೆಂಟ್ಸ್ ಇದ್ದಾರೆ ? ಈಗ ಮಾನ್ಯ ಮೊಯಿಲಿಯವರು ರೂರಲ್ ಕಾನ್ಸಿಟಿಟ್ಯೂಯೆನ್ಸಿಯಿಂದ ಚುನಾಯಿತರಾಗಿದ್ದರೆ, ಅವರಿಗೆ ಅಲ್ಲಿ ಮತದಾನದ ಹಕ್ಕು ಇರುತ್ತದೆ. ಆದೇ ಬ್ಲೇಸಿಯಸ್ ಡಿಸೋಜ ಅವರು ಮಂಗಳೂರಿನಿಂದ ಚುನಾಯಿತರಾಗಿದ್ದು ಅವರು ಅಲ್ಲಿ ಪಕ್ಕದ ಹಳ್ಳಿಯಲ್ಲಿ ವಾಸ ಇದ್ದರೆ, ಅವರಿಗೆ ಮತದಾನದ ಹಕ್ಕು ಇರುವುದಿಲ್ಲ, ಇದನ್ನು ತಾವು ಅರ್ಥಮಾಡಿಕೊಳ್ಳಬೇಕು ಇವೊತ್ತು ಅಸೆಂಬ್ಲಿ ಕ್ಷೇತ್ರದಿಂದ ಚುನಾಯಿತರಾಗಿರತಕ್ಕ ಮೇಲ್ಮನೆಯ ಸದಸ್ಯರಿಗೆ ಮತ್ತು ನಾಮಿನೇಟ್ ಆಗಿರತಕ್ಕ ಸದಸ್ಯರಿಗೆ, ಸಾಧಾರಣವಾಗಿ ಆ ಸದಸ್ಯರು ಆ ಜಿಲ್ಲೆಯಲ್ಲಿಯೇ ವಾಸ ಇದ್ದರೆ ಅವರಿಗೆ ಮತದಾನವು ಹಕ್ಕು ಇರುತ್ತದೆ. ಸಾಧಾರಣ ವಾಸ ಅಂದರೆ ಏನು ಎನ್ನುವುದನ್ನು ನಾನು ಬರೆದುಕೊಂಡಿಲ್ಲ. ಇನ್ನು ಆರ್ಡಿನರಿ ರೆಸಿಡೆಂಟ್ಸ್ ಅವರ ಬಗ್ಗೆ ನಾನು ಓದಿ ಹೇಳುತ್ತೇನೆ.

Ordinary resident has been defined in the people's Representation Act.

ಶ್ರೀ ಎಂ. ವೀರಪ್ಪಮೊಯಿಲಿ.—ಆರ್ಡಿನರಿ ಎಂದರೆ ಏನು ?

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಪಂಡಿತ ಅಲ್ಲ, ಈ ಆಕ್ಟ್ ನಾನು ಬರೆದಿಲ್ಲ. ಆರ್ಡಿನರಿ ಎಂದರೆ ಸಾಮಾನ್ಯವಾಗಿ ಆ ಜಿಲ್ಲೆಯಲ್ಲಿ ವಾಸ ಇರತಕ್ಕದ್ದು. ನಾನೂ ಕೂಡ ವಿಧಾನ ಸಭೆಯಿಂದ ಚುನಾಯಿತನಾದ ಸದಸ್ಯ. ನಾನು ಗುಂಡ್ಲುಪೇಟೆಯಲ್ಲಿ ವಾಸವಾಗಿದ್ದೇನೆ, ನನಗೂ ಕೂಡ ಈ ಮತದಾನದ ಹಕ್ಕಿಲ್ಲ. ಕಾರಣ ಈ ಶಾಸನದ ಜಿಲ್ಲೆ ಎಂದರೆ ಏನೆಂದು ಡಿಫೈನ್ ಮಾಡಿದ್ದಾರೆ.

District means a revenue district excluding the urban parts, ಈ ದೃಷ್ಟಿಯಿಂದ ಯಾರು ಯಾರು ನಾವು ನಿರ್ದೇಶನ ಹೊಂದಿದ್ದಾರೆ. ಯಾರು ಯಾರು ವಿಧಾನ ಸಭೆಯಿಂದ ಚುನಾಯಿತರಾಗಿದ್ದಾರೆ ಅವರ ಹೆಸರು ತಾ; ೧-೧-೮೭ರ ಚುನಾವಣೆಗೆ ಮುಂಚೆ ಮತ

ದಾರರ ಪಟ್ಟಿಯಲ್ಲಿದ್ದವು. ಆ ಪಟ್ಟಿ ಪಬ್ಲಿಷ್ ಆಯಿತು. ಅವರು ಯಾವುದೇ ಹಳ್ಳಿಯಲ್ಲಿದ್ದರೂ ನಾನು ಇಂಥ ಹಳ್ಳಿಯಲ್ಲಿ ವಾಸವಾಗಿದ್ದೇನೆಂದು ತೋರಿಸಿದರೆ ಅವರಿಗೆ ಮಾತ್ರ ಮತದಾನದ ಹಕ್ಕಿದೆ. ಆದರೆ ತಾ: ೧–೧–೮೭ರ ನಂತರದವರಿಗೆ ಮತದಾನದ ಹಕ್ಕಿಲ್ಲ.

ಅಧ್ಯಕ್ಷರು.—ಮಾನ್ಯ ನಜೀರ್ ಸಾಬ್‌ರವರೇ ನೀವು ಹೇಳಿದ್ದು ಮಾನ್ಯ ಖಾರ್ಗೆಯವರಿಗೆ ಕೇಳಿಸಲಿಲ್ಲ. ಇನ್ನೊಂದು ಸಾರಿ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಹೇಳುವುದಕ್ಕಿಂತ ಮುಂಚೆಯೇ ನಿಯಮ ೧೩೯(ಎ)ನಲ್ಲಿ ಏನಿದೆ ಎಂಬುದನ್ನು ನಾನು ಹೇಳಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.–ನಿಮಗೆ ಲಾಭವಾಗುವಂತೆ ನಾನು ಉತ್ತರ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.—ಸ್ವಾಮಿ, ನನಗೆ ಲಾಭವಾಗಬೇಕಾಗಿಲ್ಲ. ಜನರಿಗೆ ಲಾಭ ಆದರೆ ಸಾಕು. ನಾವುಂಚಿತವಾಗಿಯೇ ತಮಗೆ ಹೇಳಿದ್ದೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಇಲ್ಲಿ ಡೆಫಿನಿಷನ್ ಕ್ಲಾಸ್ ೨ ಹಾಕಿದ್ದಾರೆ.

Sub—section (9) of Section 2,

"District means a revenue district but excluding therefrom the limits of a muncipal corporation, a muncipalty, or a sanitary board, a town board or a notified area committee constituted or continued under any law for the time being in force"

ನಾನು ಗುಂಡ್ಲುಪೇಟೆ ನಗರದಲ್ಲಿ ವಾಸವಾಗಿದ್ದೇನೆ. ಈ ಶಾಸನವನ್ನು ಮಾಡಿದರೂ ನನಗೆ ಮತದಾನದ ಹಕ್ಕಿಲ್ಲ........

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.—ಇಲ್ಲಿ ಕಾನೂನು ದುರುಪಯೋಗವಾಗಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ನಾವು ಕಾನೂನನ್ನು ಎಲ್ಲಿ ದುರುಪಯೋಗ ಮಾಡಿದ್ದೇವೆ ? ಪ್ರಜಾಪ್ರಭುತ್ವವನ್ನು ನಾವು ಎಲ್ಲಿ ಭೂಗತ ಮಾಡಿದ್ದೇವೆ ? ಕಾನೂನಿನಲ್ಲಿ ಏನಿದೆ ಅದನ್ನು ನಾವು ಡಿವಿಜನಲ್ ಕಮೀಷನರ್‌ರವರಿಗೆ ಹೇಳಿದ್ದೇವೆ. ಸೆಕ್ಷನ್ ೧೩೯(ಎ)ನಲ್ಲಿ ಏನಿದೆ ಎಂದರೆ,

"the members of the State Legislative Assembly and the Stat eLegislative Council and members of parliment representing a part or whole of the district whose constituencies lie whithin the jurisdiction of the Zilla parishad and the members of the State Legislative Council not elected from territorial constituencies and ordinary resident in the district shall be entetled to take part the proceedings of and to vote at the meetings of the Zilla parishad"

I don't know how I have contravened the law.

IPC or ೪೨೦ ಹಾಕಬೇಕೆಂದು ತಾವು ಹೇಳುವುದಾದರೆ ನಾವು ಯಾರಿಗೆ ಹಾಕಬೇಕು ? ಮಾನ್ಯ ಸದಸ್ಯರಾದ ಗುಂಡಯ್ಯ ಶೆಟ್ಟಿಯವರಿಗೆ ಮತದಾನದ ಹಕ್ಕು ಬರಬೇಕಾದರೆ ಅವರು ಏನು ಹೇಳುತ್ತಾರೆಂದರೆ

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ೪೨೦ ಹಾಕಬೇಕೆಂದು ಆ ಕಡೆಯವರು ಹೇಳುತ್ತಿದ್ದಾರೆ. ಆ ೪೨೦ನ್ನು ಯಾರಿಗೆ ಹಾಕಬೇಕು ?

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರು ಅಲ್ಲಿ ಬಲೆಗೆಸಿಕ್ಕಿ ಹಾಕಿಕೊಂಡು ಅಲ್ಲಿಂದ ಹೊರಗೆ ಬರುವುದಕ್ಕೆ ಆಗದೆ ಒದ್ದಾಡುತ್ತಿದ್ದಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಡಿವಿಜನಲ್ ಕಮಿಷನರ್‌ರವರು ಒಂದು ನೋಟೀಸ್ ಪಬ್ಲಿಷ್ ಮಾಡಿದ್ದಾರೆ. ಇದರಲ್ಲಿ ಸರ್ಕಾರದ ಪ್ರವೇಶ ಇಲ್ಲ. ಸೆಕ್ಷನ್ ೧೪೯(ಎ)ಪ್ರಕಾರ ಯಾರು ಯಾರು ಮತ ಹಾಕುವುದಕ್ಕೆ ಅರ್ಹರೇದು ಇದೆ ಅದರ ಪ್ರಕಾರ ಕಾರ್ಯನಿರ್ವಹಿಸುವಂತೆ ಜವಾಬ್ದಾರಿ ಕೊಡಬೇಕೆಂದು ನಾವು ಅವರಿಗೆ ಹೇಳಿದ್ದೇವೆ. ಇದು ಕಾನೂನು ರೀತಿಯಲ್ಲಿ ಇದೆ. ಇದರಲ್ಲಿ ಸರ್ಕಾರ ಯಾವುದೇ ರೀತಿಯಲ್ಲಿ ನಿರ್ದೇಶನ ಮಾಡುವುದರಲ್ಲಿ ಕಾನೂನನ್ನು ಅಧಿಕಾರವನ್ನು, ದುರುಪಯೋಗಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ ಸದಸ್ಯರು ಯಾರು ಎನ್ನುವುದಕ್ಕೆ ಡೆಫನೇಷನ್ ಬಹಳ ಸ್ಪಷ್ಟವಾಗಿದೆ. ಒಂದು ಉದಾಹರಣೆ ಹೇಳು ವುದಾದರೆ ಗುಲ್ಬರ್ಗದಲ್ಲಿ ಕಾಂತರವರಿಗೆ ಓಟು ಮಾಡಲು ಅವಕಾಶವನ್ನು ನಾವಾದರೂ ಕೊಟ್ಟಿದೇವೆ. ನೀವು ಕೊಟ್ಟಿಲ್ಲ. ನೀವು ಅದನ್ನು ಮಾಡುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಯಾವ ಯಾವ ರೀತಿಯಲ್ಲಿ ಕೊಟ್ಟಿದ್ದೀರಿ ಎನ್ನುವುದನ್ನು ಕೂಡ ಹೇಳುತ್ತೇವೆ. ಮತ್ತೆ ಬೇರೆಯವರಿಗೂ ಕೂಡ ಯಾವ ರೀತಿ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೀರಿ ಅದನ್ನು ಕೂಡ ಹೇಳುತ್ತೇವೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ ಟೀಚರ್ಸ್ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಯಾವ ಯಾವ ಜಿಲ್ಲೆಗಳಿಗೆ ಬರುತ್ತಾರೋ ಅಲ್ಲಿ ರೆಪ್ರಸೆಂಟ್ ಮಾಡುವಂತೆ ಇರುತ್ತದೆ. ಅವರು ಯಾವ ಪಕ್ಷದವರೇ ಆಗಲಿ, ಆ ಕ್ಷೇತ್ರದಲ್ಲಿ ಮತ ಮಾಡಬೇಕು. ಇದು ಶಾಸನಬದ್ಧವಾಗಿ ಇರುತ್ತದೆ. ನಿಮ್ಮ ಅಭಿಪ್ರಾಯ ಹೇಗಿರುತ್ತದೆಯೋ ಅದರ ಬಗ್ಗೆ ನಾನು ಹೇಳುತ್ತಿಲ್ಲ. ಚುನಾವಣೆಯಾಗಬೇಕಾದರೆ ಯಾರು ಯಾರಿಗೆ ಯಾವರೀತಿ ಅಧಿಕಾರ ಕೊಟ್ಟಿರುತ್ತೇವೆಯೋ ಆ ರೀತಿ ಆಗುತ್ತಿದೆ, ಟೀಚರ್ಸ್ ನಾಲ್ಕು ಹಳ್ಳಿಗಳಲ್ಲಿ ಇದ್ದರೆ ನಾಲ್ಕು ಹಳ್ಳಿಗಳಲ್ಲಿಯೂ ಓಟ್ ಮಾಡಬೇಕಾಗುತ್ತದೆ. ಪಾರ್ಲಿಮೆಂಟ್‌ಗೆ ಮೂರು ಕಡೆ ಎಂದರೆ ಘೋರ್ಪಡೆಯವರು ಮೂರುಕಡೆ ಮತ ಚಲಾಯಿಸುತ್ತಾರೆ.

ಇನ್ನು ಮಾನ್ಯ ಮೊಯಿಲಿಯವರು ನಾಮ ನಿರ್ದೇಶನದ ಬಗ್ಗೆ ಹೇಳಿದರು, ಇವೊತ್ತು ರಾಜ್ಯ ಸಭೆಯಲ್ಲಿ ೧೨ ಜನರನ್ನು ನಾಮಿನೇಟ್ ಮಾಡತಕ್ಕಂಥದ್ದು ಆರ್ಟಿಕಲ್ ೮೦ರಲ್ಲಿ ಇದೆ, ಅದೇ ರೀತಿ ನಾಮಿನೇಟ್ ಮಾಡತಕ್ಕಂಥದನ್ನು ಕೌನ್ಸಿಲ್‌ನಲ್ಲಿ ಇಟ್ಟುಕೊಂಡು ರಾಜ್ಯಾಂಗಬದ್ಧವಾಗಿ ಮಾಡಿದ್ದೇವೆ. ನಾವೇನು ಸ್ವಂತ ರಾಜ್ಯಾಂಗವನ್ನು ಸೃಷ್ಟಿಮಾಡಿಕೊಂಡು ಮಾಡಿಲ್ಲ. ತಾವು ಏನಾದರೂ ಮಾಡಿದ್ದರೆ ಅದು ನಮಗೆ ಗೊತ್ತಿಲ್ಲ. ಈ ದೇಶದ ಜನತಂತ್ರದಲ್ಲಿ ರಾಜ್ಯಾಂಗದಿಂದ ನನ್ನ ಅಭಿಪ್ರಾಯದಿಂದ ಇನ್ನೊಬ್ಬರಿಗೆ ಲಾಭವಾಗುತ್ತದೆಯೋ ಎನ್ನುವುದನ್ನು ನೋಡಬೇಕು, ಇದಕ್ಕಾಗಿಯೇ ನಾವು ನಿರ್ದೇಶನ ಮಾಡಬೇಕೆನ್ನುವುದು ಹಿಂದುಳಿದ ವರ್ಗದವರಿಗೆ ಅವಕಾಶ ಕೊಡಬೇಕು ಎನ್ನುವುದು ಈ ಸದನದ ಉದ್ದೇಶ. ಅದನ್ನು ಶಾಸನದಲ್ಲಿ ಸೇರಿಸಿದ್ದೇವೆ. ಶಾಸನದಲ್ಲಿ ಇದನ್ನು ಸೇರಿಸಿ ಎಂದು ಮಾನ್ಯ ಖರ್ಗೆಯವರು ಹೇಳಿದ್ದುದು ನನಗೆ ಜ್ಞಾಪಕ ಇದೆ, ಇವತ್ತು ಗ್ರಾಮ ಜೀವನದಲ್ಲಿ ಎಲ್ಲಾ ವರ್ಗದವರಿಗೂ ಚುನಾಯಿತರಾಗಿ ಬರುವುದಕ್ಕೆ ಸಾಧ್ಯವಿಲ್ಲ, ಕೆಲವು ವರ್ಗದವರಿಗೆ ರಕ್ಷಣೆಯನ್ನು ಕೊಡಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ,—ಈಗ ಹಿಂದುಳಿದ ವರ್ಗದವರೂ ಎಲೆಕ್ಟ್ ಆಗಿ ಬಂದಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಾಮನಿರ್ದೇಶನ ಮಾಡುವುದು ಅದು ನಿಮಗೆ. ಅನುಕೂಲವಾಗಿಯೇ ಇದೆ.

ಶ್ರೀ ಎಸ್. ಬಂಗಾರಪ್ಪ.—ಕೌನ್ಸಿಲ್‌ನಲ್ಲಿ ಮೂರು ಜನರನ್ನು ನಾಮನಿರ್ದೇಶನ ಮಾಡುತ್ತೇವೆಂದು ಹೇಳಿದಿರಿ, ಮತ್ತೆ ರಾಜ್ಯ ಸಭೆಗೆ ೧೨ ಜನರನ್ನು ನಾಮಿನೇಟ್ ಮಾಡುತ್ತಾರೆಂದೂ ಕೂಡ ಹೇಳಿದ್ದೀರಿ. ಎಷ್ಟು ಜನರನ್ನು ನಾಮಿನೇಟ್ ಮಾಡಬೇಕು ಎನ್ನುವ ಬಗ್ಗೆ ರಾಜ್ಯಾಂಗದಲ್ಲಿ ಇದೆ. ಹಿಂದುಳಿದ ವರ್ಗದವರಿಗೆ ಯಾವರೀತಿ ನಾಮಿನೇಟ್ ಮಾಡಬೇಕೆಂಬುದರ ಬಗ್ಗೆ ಸರ್ಕಾರಿ ಆಜ್ಞೆಯೇ ಇರುತ್ತದೆ. ಅದರಂತೆ ಮಾಡದೆ ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ಮಾಡುವುದಕ್ಕೆ ಹೊರಟಿದ್ದೀರಿ. ಅದಕ್ಕೆ ಉತ್ತರ ಕೊಡಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಈಗ ಇರತಕ್ಕಂಥ ಶಾಸನದ ಪ್ರಕಾರ ನಾಮಿನೇಟ್ ಮಾಡತಕ್ಕಂಥ ಅಧಿಕಾರ ನಮಗೆ ಇಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಯವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಈ ಮಧ್ಯದಲ್ಲಿ ರನ್ನಿಂಗ್ ಕಾಮೆಂಟರಿ ಆಗುತ್ತಿರುವುದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ.

೨-೩೦ ಪಿ. ಎಂ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಾಮನಿರ್ದೇಶನ ಜನತಂತ್ರಕ್ಕೆ ವಿರೋಧವಾದುದು ಅಲ್ಲ. ಜನತಂತ್ರವನ್ನು ಪ್ರೋತ್ಸಾಹಿಸತಕ್ಕ ವ್ಯವಸ್ಥೆ ಎಂದು ಇದೆ. ಅದು ಶಾಸನದಲ್ಲೇ ಇದೆ. ಇಬ್ಬರನ್ನು ನಾಮನಿರ್ದೇಶನ ಮಾಡತಕ್ಕ ಅಧಿಕಾರವನ್ನು ಕೊಟ್ಟಿದೆ. ಅದನ್ನು ಕೊಟ್ಟಿರತಕ್ಕದು ಜಿಲ್ಲಾಪರಿಷತ್ತುಗಳಿಗೆ. ಈ ಸಭೆ ಅವಕಾಶ ಕೊಡುವುದಾದರೆ ಯಾವ ವರ್ಗ ಕೃಷಿ ಕಾರ್ಮಿಕ, ಎಲ್ಲಿಯೂ ಚುನಾವಣೆಯಲ್ಲಿ ಬರುವುದಕ್ಕಾಗುವುದಿಲ್ಲ ಅಂಥ ವರ್ಗಕ್ಕೆ ಏಕೆ ಅವಕಾಶ ಕೊಡಬಾರದು ?

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.—ಹಿಂದುಳಿದ ವರ್ಗದವರ ಬಗ್ಗೆ, ದಲಿತರ ಬಗ್ಗೆ ಮಾತನಾಡುವವರು ಹೀಗಾದರೆ ಹೇಗೆ ? ಅವರು ಬರೀ ಭಾಷಣಕ್ಕೆ ನಿಂತರೆ ಹೇಗೆ ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳಿದ್ದು ಮಂಡಲಕ್ಕೋ ಅಥವಾ ಜಿಲ್ಲಾ ಪರಿಷತ್ತಿಗೋ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಂಡಲಕ್ಕೆ.

ಶ್ರೀ ಎಸ್. ಬಂಗಾರಪ್ಪ.—ಕೃಷಿ ಕಾರ್ಮಿಕರು ಮಂಡಲಕ್ಕೆ ಎಂದು ಹೇಳಿದಿರಿ...

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾಡಿದರೆ ಏಕೆ ಆಗಬಾರದು ? ಕೃಷಿ ಕಾರ್ಮಿಕರು ಎಂದರೆ ಅಂತರಂಗ ಕರಗುತ್ತದೆ, ಹಿಂದುಳಿದ ವರ್ಗದವರು ಎಂದರೆ ಹೃದಯ ಕರಗುತ್ತದೆಂದು ಹೇಳುವ ಈ ಜನಕ್ಕೆ ಬಹುಶಃ ಈಗ ಇದು ಸಿಂಹಸ್ವಪ್ನವಾಗಿ ಕಾಣಬಹುದು. ಅಧಿಕಾರ ನನಗೆ ಇರಲಿ, ಅವರಿಗೆ ಅಧಿಕಾರ ಕೊಡುವುದು ಬೇಡ......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಕೃಷಿ ಕಾರ್ಮಿಕರನ್ನು ಮಾಡಬೇಕೆಂದು ಅವಕಾಶ ಎಲ್ಲಿದೆ ? ಅಧಿಕಾರ ಹಂಚಿಕೆ ಮಾಡುವುದಕ್ಕೆ......

(ಗೊಂದಲ)

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಹಿಂದುಳಿದ ವರ್ಗ ಹೋಯಿತು, ಈಗ ಕೃಷಿ ಕಾರ್ಮಿಕರು...

(ಗೊಂದಲ)

ಶ್ರೀ ಜಿ. ಮಾದೇಗೌಡ.—ಇಲ್ಲದೆ ಇರುವುದನ್ನೆಲ್ಲ ಏತಕ್ಕೆ ಹೇಳುತ್ತೀರಿ ?

ಅಧ್ಯಕ್ಷರು.—ಮಾನ್ಯ ಮಾದೇಗೌಡರೇ ತಾವು ಕುಳಿತುಕೊಳ್ಳಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ನನ್ನ ಅಭಿಪ್ರಾಯವನ್ನು ಹೇಳಬಾರದೆ ? ಆದ್ದರಿಂದ ತಮ್ಮ ಮೂಲಕ ಪ್ರತಿಪಕ್ಷದ ಮಿತ್ರರಲ್ಲಿ ಪ್ರಾರ್ಥಿಸುತ್ತೇನೆ. ಯಾವುದೇ ರೀತಿಯಲ್ಲಿ ಇಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಿಲ್ಲ, ದುರುದ್ದೇಶದಿಂದ ಮಾಡಿಲ್ಲ. ಶಾಸನದ ಪ್ರಕಾರ ಚುನಾವಣೆ ನಡೆಯಬೇಕು. ಶಾಸನದ ಪ್ರಕಾರ ಯಾರು ಗೆದ್ದು ಬರುತ್ತಾರೆ ಅವರು ಅಧಿಕಾರ ಹಿಡಿದುಕೊಂಡು ಅಧಿಕಾರ ಮಾಡಲಿ, ನೋಡಿ ಸಂತೋಷಪಡಿ. ಅಧಿಕಾರಕ್ಕೆ ಯಾರಾದರೂ ಬರಲಿ, ನೋಡಿ ಸಂತೋಷಪಡೋಣ. ೪೨೦ ಎಂಬ ಪದಗಳು ಇಲ್ಲಿ ಶೋಭಿಸುವುದಿಲ್ಲವೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ಮತ್ತು ದಯವಿಟ್ಟು ಚರ್ಚೆಯನ್ನು ಇಲ್ಲಿ ಮುಕ್ತಾಯಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತೇನೆಂದು ಹೇಳಿ ಉತ್ತರ ಕೊಟ್ಟಿದ್ದಾರೆ. ಉತ್ತರ ಕೊಡತಕ್ಕ ಸಂದರ್ಭದಲ್ಲಿ ಟೆರಿಟೋರಿಯಲ್ ಜೂರಿಸ್‌ಡಿಕ್ಷನ್, ಆರ್ಡಿನರಿ ರೆಸಿಡೆಂಟ್ ಎಂಬ ಪದಕ್ಕೆ ಅರ್ಥ ವ್ಯಾಖ್ಯಾನ ಮಾಡಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಮಾಡಿಲ್ಲ. ಶಾಸನ ಮಾಡಿದೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ನೀವು ಹೇಳಿದಿರಿ.

SRI ABDUL NAZEER SAB.—The word "Ordinary resident" has been defined under Section 20 of the Peoples Representation Act. It is not my opinion. It has been well defined by the law of the land. ಎಲ್ಲದಕ್ಕೂ ನನಗೆ ಹೇಳುತ್ತೀರಿ. ನನ್ನನ್ನು ಆಧುನಿಕ ಮನು ಮಾಡುತ್ತಿದ್ದೀರಾ? ಸಂತೋಷ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಧುನಿಕ ಮನು ಎಂದು ಹೆಸರಿಸುತ್ತೀರಿ. ಆ ಮನು ಸಿದ್ಧಾಂತದ ವಿರುದ್ಧ ಹೋರಾಟ ಮಾಡಿದ ಜನ ನೀವು, ಮನು ಸ್ಮೃತಿ ವಿರುದ್ಧ ಹೋರಾಡಿದ ಜನ ನೀವು ಆಧುನಿಕ ಮನು ಆಗಬೇಕು ಎಂದು ಹೇಳುತ್ತೀರಾ? ನಾಚಿಕೆಗೇಡುತನ.

ಶ್ರೀ ಅಬ್ದುಲ್ ನಜೀರ್ ಸಾಬ್.—ಆಧುನಿಕ ಅಂಬೇಡ್ಕರ್ ಎಂದು ಹೇಳಿದರೂ ಸಂತೋಷ.

ಶ್ರೀ ರಾಮಕೃಷ್ಣ ಹೆಗಡೆ.—ಆಧುನಿಕ ಮನು ಪುರಾತನ ಮನು ತರಹ ಇರುತ್ತಾನೆ ಎಂದು ಹೇಗೆ ಗೊತ್ತು? ಆಧುನಿಕ ಮನು ಎಂದರೆ ಡಾ॥ ಅಂಬೇಡ್ಕರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮನು ಸ್ಮೃತಿ ಬಗ್ಗೆಯಾಗಲಿ ಮನು ಬಗ್ಗೆ ಆಗಲಿ ಎಳ್ಳಷ್ಟೂ ಆಸಕ್ತಿ ಇರಲಿಲ್ಲ. ಆ ಹೆಸರು ಕೊಟ್ಟರೂ ಕೂಡ ಸರಿಯಲ್ಲ. ಹರಿಜನ ಹೆಸರಿಗೇ ಅವರು ಒಪ್ಪಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಗೆ ಹೇಳುತ್ತೇನೆ.

ಶ್ರೀ ಎನ್. ಎಂ. ಅಡ್ಯಂತಾಯ.—ಮನು ಎಂದು ಹೇಳಿದ್ದೋ, ಮಜನು ಎಂದು ಹೇಳಿದ್ದೋ?

ಶ್ರೀ ಬಿ. ಬಸವಲಿಂಗಪ್ಪ.—ಡಾ॥ ಅಂಬೇಡ್ಕರ್ ಅವರನ್ನು ಆಧುನಿಕ ಮನು ಎಂದು ಏನು ಹೇಳಿದ್ದಾರೆ...

ಅಧ್ಯಕ್ಷರು.—ಮನು ವಿಷಯ ಬಿಡಿ.

ಶ್ರೀ ಬಿ. ಬಸವಲಿಂಗಪ್ಪ.—ನಾವು ಅದನ್ನು ಒಪ್ಪುವುದಕ್ಕೆ ತಯಾರಿಲ್ಲ. ಡಾ॥ ಅಂಬೇಡ್ಕರ್ ಅವರೇ ಅಂಬೇಡ್ಕರ್. ಮನು ಏನಿದ್ದಾನೆ ಅವನು ಈ ಸಮಾಜಕ್ಕೆ ದ್ರೋಹ ಮಾಡಿದ ಮನುಷ್ಯ. ಅವನಿಗೆ ಅಂಬೇಡ್ಕರ್ ಹೆಸರು ಏತಕ್ಕೆ ಅಂಟಿಸಬೇಕು?

ಶ್ರೀ ಅಬ್ದುಲ್ ನಜೀರ್ ಸಾಬ್.—ಅಂಬೇಡ್ಕರ್ ಅವರ 'ಶೂದ್ರ ಸಿದ್ಧಾಂತ' ಜಗತ್ತಿನಲ್ಲೇ ಅಪ್ರತಿಮ ಕೃತಿ. ಅದನ್ನು ವೈಜ್ಞಾನಿಕವಾಗಿ ಅಲ್ಲಗೆಳೆಯುವುದಕ್ಕೆ ಇನ್ನೊಬ್ಬ ಹುಟ್ಟಿಲ್ಲ. ನನಗೆ ಆ ವಿಶ್ವಾಸ ಇದೆ. ಮನು ಒಪ್ಪದೇ ಇದ್ದರೆ ನಾನೂ ಒಪ್ಪುವುದಿಲ್ಲ. ಅಂಬೇಡ್ಕರ್ ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಬ್ರಹ್ಮನ ೧೪ ಹಗಲುಗಳಿಗೆ ಒಂದು ಮನು. ಆ ರೀತಿ ಮನು ಆಗಬೇಕೇ ವಿನಹ ಅಂಬೇಡ್ಕರ್ ಆಗಬೇಕಾದ ಅಗತ್ಯ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಒಬ್ಬ ಅಡಿಷನಲ್ ಮನು ಅಲ್ಲಿ ಸಿಕ್ಕಿದರು. ಸಭಾಧ್ಯಕ್ಷರೆ, ಮಾನ್ಯ ಸಚಿವರು ಈಗತಾನೆ ನಾಮಕರಣ ಮಾಡುವ ವಿಚಾರದಲ್ಲಿ ಹೇಳಿದರು. ಪೀಪಲ್ಸ್ ರೆಪ್ರಸೆಂಟೇಷನ್ ಆಕ್ಟ್ ಪ್ರಕಾರ, ಸೆಕ್ಷನ್ ೨೦ರ ಪ್ರಕಾರ ಏನಿದೆ ಎಂಬುದನ್ನು ಹೇಳಿದ್ದೀರಿ. ನಾನು ಹೇಳಿದ್ದುದು ನೀವು ಅದನ್ನು ಹೇಳಿದ್ದೀರಿ ಎಂದು. ಈ ಸೆಕ್ಷನ್ ಹೇಳುವಾಗ ಯಾರೂ ಕೂಡ ಮೈಯೆಲ್ಲಾ ಕೆರೆದುಕೊಂಡು ಓದುವುದಿಲ್ಲ. ಬಾಯಿಬಿಟ್ಟು ಉಚ್ಚಾರ ಮಾಡಬೇಕಾಗುತ್ತದೆ. ಆ ರೀತಿ ಹೇಳಿದಿರಿ ಎಂದು ನಾನು ಹೇಳಿದೆ. ನೀವೇ ಬರೆದಿದ್ದೀರಿ ಎಂದು ಹೇಳಲಿಲ್ಲ. ನೀವು ಏನು ಬರೆದಿಟ್ಟಿದ್ದೀರಿ ಎಂದು ನನಗೆ ಗೊತ್ತಿದೆ. ಬರೆಯುವುದಕ್ಕೆ ಓದುವುದಕ್ಕೆ ನಿಮಗೆ ಎಷ್ಟು ಶಕ್ತಿ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ.

(ಗೊಂದಲ)

ಅಧ್ಯಕ್ಷರು.—ನೀವು ಕ್ಲಾರಿಫಿಕೇಷನ್ ಕೇಳುತ್ತೀರೋ ಅಥವಾ ನಾನು ರೂಲಿಂಗ್ ಕೊಡಲೊ?

ಶ್ರೀ ಎಸ್. ಬಂಗಾರಪ್ಪ.—ನಾನು ಗೌರವ ಇಟ್ಟೇ ಆ ಮಾತನ್ನು ಹೇಳಿದ್ದೇನೆ. ಮತ್ತೊಂದು ಅರ್ಥ ವ್ಯಾಖ್ಯಾನ ಮಾಡುವುದಕ್ಕೆ ಹೋದರೆ ನಾನು ಮತ್ತೊಂದು ವ್ಯಾಖ್ಯಾನವನ್ನು ಅನಿವಾರ್ಯವಾಗಿ ಮಾಡಬೇಕಾಗುತ್ತದೆ. ಏನೂ ಮಾಡುವುದಕ್ಕಾಗುವುದಿಲ್ಲ. ನೀವು ಆ ಮಟ್ಟಕ್ಕೆ ಅರ್ಥ ಮಾಡಿಕೊಳ್ಳುವವರಾದ್ದರಿಂದ......

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೆ, ಬಂಗಾರಪ್ಪನವರಿಗೆ ಅವರ ತಂದೆ ತಾಯಿಗಳು ಬಂಗಾರದಂಥ ಹೆಸರಿಟ್ಟರು. ಆದರೆ ಅವರು ಈಗ ಬಂಗಾರಾನೂ ಅಲ್ಲ ಕಬ್ಬಿಣಾನೂ ಅಲ್ಲ, ಹಾಗಾಗಿದ್ದಾರೆ.

ಅಧ್ಯಕ್ಷರು.—ನೀವು ಕ್ಲಾರಿಫಿಕೇಷನ್ ಕೇಳುತ್ತೀರೋ ಹೇಗೆ?

ಶ್ರೀ ಎಸ್. ಬಂಗಾರಪ್ಪ.—ಅವರ ಮಾತು ಕೇಳಿಸಲಿಲ್ಲ.

ಅಧ್ಯಕ್ಷರು.—ನೀವು ಬಂಗಾರಪ್ಪ ಅಲ್ಲ ಕಬ್ಬಿಣದ ಅಪ್ಪ ಎಂದು ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ನಾಮಕರಣದ ಬಗ್ಗೆ ಮಾನ್ಯ ಸಚಿವರು ಹೇಳಿದರು. ಆ ಸೆಕ್ಷನ್ ಇಲ್ಲ, ಹಿಂದುಳಿದ ವರ್ಗದ್ದು ಬಂದಿದೆ, ಆದ್ದರಿಂದ ನಾಮಕರಣ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಅದು ಸಂತೋಷಪಡತಕ್ಕ ವಿಚಾರ. ನಾಮಕರಣವನ್ನು ಯಾರೂ ಮಾಡುವುದಿಲ್ಲ ಎಂಬುದಾಗಿ ಹೇಳಿದ್ದುದು ಬಹಳ ಸಂತೋಷ. ನಾಳೆ ಕೃಷಿಕರನ್ನು, ಮತ್ತೊಬ್ಬರನ್ನು ನಾಮಕರಣ ಮಾಡುತ್ತೇವೆ ಎಂದು ಹೇಳಿದರೆ ಆಗ ಏನು ಎಂಬುದು ಆರ್ಗ್ಯುಮೆಂಟ್. ಅದಕ್ಕೆ ಅವಕಾಶ ಶಾಸನದಲ್ಲಿಲ್ಲ. ಆ ರೀತಿಯ ನಾಮಕರಣವನ್ನು ಮಾಡುವುದಕ್ಕೆ ಸಾಧ್ಯವೇ? ನಾನು ನೇರವಾಗಿ ವಿವರಣೆಯನ್ನು ಕೇಳುವುದಾದರೆ, ೪-೪ ಕ್ಷೇತ್ರಗಳಲ್ಲಿ ಬರತಕ್ಕಂತಹ ವಿಚಾರದಲ್ಲಿ ಮತ್ತೊಂದು ಸಾರಿ ವೋಟು ಮಾಡ ತಕ್ಕಂತಹ ಹಕ್ಕು ಇದೆ ಎಂಬುದಾಗಿ ತಾವು ಹೇಳಿದ್ದೀರಿ. ಆದರೆ ಟೆರಿಟೋರಿಯಲ್ ಜ್ಯೂರಿಸ್‌ಡಿಕ್ಷನ್, ಬೀದರ್, ರಾಯಚೂರು, ಬಳ್ಳಾರಿ ಹಾಗೂ ಗುಲ್ಬರ್ಗ ಜಿಲ್ಲೆಗಳಲ್ಲಿರತಕ್ಕಂತಹ ಶಾಸನ ಸಭಾ ಸದಸ್ಯರು ಯಾರು ಇದ್ದಾರೆ, ಅವರಿಗೆ ವೋಟಿನ ಹಕ್ಕು ಇದೆ. ನಾವೂ ಕೂಡ ಕೆಲವರನ್ನು ಆರಿಸಿ ವಿಧಾನ ಪರಿಷತ್ತಿಗೆ ಹಾಗೂ ವಿಧಾನ ಸಭೆಗೆ ಕಳುಹಿಸಿದ್ದೇವೆ. ಅವರಿಗೆ ಆ ಹಕ್ಕು ಇದೆ ಎಂಬುದಾಗಿ ಹೇಳುತ್ತಿದ್ದೀರಿ. ಅದೇ ರೀತಿ ಬೇರೆ ನಾಮಕರಣ ಸದಸ್ಯರೂ ಕೂಡ ಇದ್ದಾರೆ. ಅವರು ನಾಮಕರಣ ಹೊಂದಿದ ಮೇಲೆ ನಿಮ್ಮ ಪಕ್ಷವನ್ನು ಸೇರಿದ ಮೇಲೆ ಅವರಿಗೆ ಆ ಒಂದು ಅಧಿಕಾರ ಬಂತು. ಅವರಿಗೂ ವೋಟು ಮಾಡತಕ್ಕಂತಹ ಹಕ್ಕು ಹಾಗೂ ಸಂದರ್ಭ ಬರುತ್ತದೆ. ಆದ್ದರಿಂದ ಈ ವಿಚಾರವನ್ನು ಆಳವಾಗಿ ಚರ್ಚೆ ಮಾಡಬೇಕು. ಇದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಬೇಕು. ಬಹಳ ಆಳಕ್ಕೆ ಹೋಗಿ ಚರ್ಚೆ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ನೀವು ವಿವರಣೆಯನ್ನು ಕೇಳುತ್ತೀರೋ ಅಥವ ಇಲ್ಲವೋ?

ಶ್ರೀ ಎಸ್. ಬಂಗಾರಪ್ಪ.—ವಿವರಣೆಯನ್ನು ಹೇಳಿ ಇಲ್ಲಿಗೆ ಮುಗಿಸುವುದಲ್ಲ ಇದು. ಬಹಳ ಆಳವಾಗಿ ಚರ್ಚೆ ಮಾಡಬೇಕಾಗುತ್ತದೆ. ತಾವು ಬರೀ ವಿವರಣೆಯನ್ನು ಕೇಳಿ ಮುಕ್ತಾಯಗೊಳಿಸ ಬೇಕು ಎಂದರೆ ಹೇಗೆ? We have not moved any Adjournment motion here. ಆದ್ದರಿಂದ ತಾವು ದಯಮಾಡಿ ಈ ಚರ್ಚೆಗೆ ತಮ್ಮ ಅನುಮತಿಯನ್ನು ಕೊಡಬೇಕು.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು.—ನೀವು ಬೆಳಗ್ಗೆಯಿಂದ ಬೇಕಾದಷ್ಟು ಪ್ರಶ್ನೆಗಳನ್ನು ಕೇಳಿದ್ದೀರಿ.

ಶ್ರೀ ಜಿ. ಮಾದೇಗೌಡ.—ನನ್ನ ಪ್ರಶ್ನೆಗೆ ಅವರು ಉತ್ತರವನ್ನೇ ಕೊಡಲಿಲ್ಲವಲ್ಲ?

ಅಧ್ಯಕ್ಷರು.—ಏಕೆ ಕೊಡಲಿಲ್ಲ ಎಂಬುದು ಈಗ ಗೊತ್ತಾಗುತ್ತದೆ.

ಶ್ರೀ ಜಿ. ಮಾದೇಗೌಡ.—ವೋಟರ್‌ಲಿಸ್ಟನ್ನು ನಾವು ಮಾಡುವುದಿಲ್ಲ. ಯಾರಿಗೆ ನೋಟೀಸ್ ಕೊಟ್ಟು ನೀವು ಬಂದು ವೋಟು ಮಾಡಬೇಕೆಂದು ಹೇಳುತ್ತಾರೋ ಅವರು ಬಂದು ವೋಟು ಮಾಡ ಬೇಕೆಂದು ಹೇಳಿದ್ದಾರೆ.

ಅಧ್ಯಕ್ಷರು.—ಈಗ ನೀವು ಕೊಡುತ್ತೀರೋ ಅಥವಾ ಇಲ್ಲವೋ?

ಶ್ರೀ ಡಿ. ಟಿ. ಜಯಕುಮಾರ್.—ದಯಮಾಡಿ ತಾವು ರೂಲಿಂಗ್ ಕೊಡಿ. ಇನ್ನೆಷ್ಟು ಕಾಲಾವಕಾಶ ಕೊಡುತ್ತೀರಿ.

ಶ್ರೀ ಜಿ. ಮಾದೇಗೌಡ.—ವೋಟರ್ಸ್ ಯಾರು ಎಂಬುದನ್ನು ನಮಗೆ ಕೊಡದೆ ಗುಟ್ಟಾಗಿ ಇಟ್ಟುಕೊಂಡಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಇಷ್ಟೊತ್ತಿನವರೆಗೆ ಕಂಠ ಶೋಷಣೆ ಮಾಡಿಕೊಂಡಿದ್ದೇನೆ. ಯಾರ್ಯಾರು ವೋಟು ಮಾಡಬೇಕೆಂಬುದನ್ನು ಲಿಸ್ಟ್ ಮಾಡುವುದಿಲ್ಲ. ಈಗಾಗಲೇ ಚುನಾವಣೆಯಾಗಿ, ಚುನಾಯಿತ ಸದಸ್ಯರು ಯಾರು ಎಂಬುದು ಗೆಜೆಟ್‌ನಲ್ಲಿ ಬರುತ್ತದೆ. ಅದು ಅವರಿಗೂ ಗೊತ್ತಿದೆ, ನಮಗೂ ಗೊತ್ತಿದೆ. ಇವೊತ್ತು ಒಂದು ಪಟ್ಟಿ ಮಾಡಿದ್ದೇವೆ. ಅದು ಏನಾಗಿದೆ ಎಂದರೆ ೧ನೇ ಜನವರಿ ೧೯೮೭ರಲ್ಲಿ ಈ ಶಾಸನದ ಪ್ರಕಾರ ಜಿಲ್ಲಾ ಪರಿಷತ್ತಿನ ಮತದಾರರ ಪಟ್ಟಿಯನ್ನು ತಯಾರಿಸುವಾಗ ಗ್ರಾಮದಲ್ಲಿ ನನ್ನ ಹೆಸರು ನೋಂದಣಿಯಾಗಿದ್ದರೆ, ನಾನು ಆ ಮೀಟಿಂಗ್‌ಗೆ ಹಾಜರಾಗುವ ಹಕ್ಕು ಬರುತ್ತದೆ.

SRI G. MADEGOWDA.—Why should he repeat? I am a voter in the village, I am also a voter in the Town.

ಶ್ರೀ ಆರ್. ವೆಂಕಟರಾಮಯ್ಯ.—ವೋಟರ್‌ಲಿಸ್ಟನ್ನು ಕೊಡಿಸಿಕೊಡಿ. ಅಷ್ಟೇ ಸಾಕು. ಅದನ್ನು ಏಕೆ ದೊಡ್ಡ ಸಮಸ್ಯೆಯನ್ನಾಗಿ ಮಾಡುತ್ತೀರಿ?

ಶ್ರೀ ಅಬ್ದುಲ್ ನಜೀರ್ ಸಾಬ್.—ಚುನಾಯಿತ ಸದಸ್ಯರ ಪಟ್ಟಿ ಗೆಜೆಟ್‌ನಲ್ಲಿ ಏನು ಬಂದಿದೆ, ಅದನ್ನು ಈಗಲೇ ಮಾನ್ಯ ಸದಸ್ಯರಿಗೆ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

SRI M. VEERAPPA MOILY.—Sir, the definiton of an "ordinarily resident" as per the Representation of people Act. 1959 is,

> "A Member of Parliament or of the Legislature of a State shall not during the term of his office cease to be ordinarily resident in the constituency in the elctoral roll of which he is registered as an elctor at the time of his election as such member, by reason of his absence from that constituency in connection with his duties as such member."

That means even if he comes outside on his duty, he is deemed to be an ordinarily resident. This is the interpretation given here. ಕ್ಲಾರಿಫಿಕೇಷನ್ ಏನು ಬೇಕೆಂದರೆ ಈಗ ವೈಜನಾಥ ಪಾಟೀಲರು, ಎಂ.ಎಲ್.ಸಿ. ಅವರು ಗುಲ್ಬರ್ಗಾದಲ್ಲಿ ರೆಸಿಡೆಂಟ್ ಆಗಿರತಕ್ಕವರು, ಅವರಿಗೆ ಬೀದರ್, ರಾಯಚೂರಿಗೆ ಓಟಿಂಗ್ ಕೊಟ್ಟಿದ್ದೀರಿ. ಬಳ್ಳಾರಿ ಗುಲ್ಬರ್ಗಾಕ್ಕೂ ಕೊಟ್ಟಿದ್ದೀರಿ.

SRI ABDUL NAZIR SAB.—Those have territorial jurisdiction, ordinarily residence is not a qualification if he has been elected for Parliament or the State Legislature.

SRI M. VEERAPPA MOILY.—Sir, this is a very ordinary law. A person cannot exercise his votes in two places even under the Representation of Peoples Act. It is an ordinary law of the land.

SRI ABDUL NAZIR SAB.—Sir, let the Hon'ble Member go through the ordinary law of the land.

(Interruptions)

SRI M. VEERAPPA MOILY.—Because a person's name is in four Electoral Rolls, he cannot exercise votes in four places. Sir, I quote :

> "Subject to the provisions, Member of Legislative Assembly will be a Member representing on behalf of the whole of the District, whose constituency lie within the jurisdiction of the Zilla Parishads and the members of the State Legislative Council not elected from territorial constituency ordinary residents in the District shall be entitled to take part."

One cannot be an ordinarily resident in so many districts. Can it be? He can be an ordinarily risident in one district. Can we interpret a law that he is an ordinarily resident in two districts?

SRI ABDUL NAZIR SAB.—Sir, the definition of ordinarily resident applies to two categories of members Legislative Coucil, they are nominated and elected from the Assembly constituency, For Example, if Sri Vaijanath patil is elected from the Legislative Assembly Contituency or if he is nominated by the Government, then your argument is tenable. Otherwise, your argument holds no water.

SRI M. VEERAPPA MOILY.—One person cannot find place as an Elector in the Electoral Rolls of so many districts. He can excercise one vote in one Electoral Roll and forfeits his right to vote in the rest of the Electoral Rolls.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮೊಯಿಲಿಯವರು ಕನ್‌ಫ್ಯೂಸನ್ ಕ್ರಿಯೇಟ್ ಮಾಡುತ್ತಿದ್ದಾರೆ. ನಮ್ಮ ಮುಂದೆ ಇರತಕ್ಕ ಚಿಕ್ಕ ಪ್ರಶ್ನೆ ಸೆಕ್ಷನ್ ೧೬೫ ಅನ್ನು ಅರ್ಥ ಮಾಡಿಕೊಳ್ಳ ಬೇಕು. ನೀವು ಅದನ್ನು ಸ್ಪಷ್ಟವಾಗಿ ತಿಳಿದು ಕೊಳ್ಳಿ. ಬಿಲ್‌ನಲ್ಲಿ ಸ್ಪಷ್ಟವಾಗಿದೆ. ಅದನ್ನು ಒಂದು ಸಲ ಓದುತ್ತೇನೆ.

> "Subject to the provisions of Clause(b), the members of the State Legislative assembly and the State Legislative Council and members of Parliament representing a part of whole of the district whose constituencies lie within the juridiction of the Zilla Parishad and the members of the State Legislative Council not elected from territorial constituencies ordinarily resident in the district shall be entitled to take part in the proceedings of and to vote at the meetings of the Zilla Parishad."

This clause 'ordinary residents' applies only to such of the members who are in the jurisdiction. ಟೆರಿಟೋರಿಯಲ್ ಜುರಿಸ್‌ಡಿಕ್ಷನ್ ಕಾನ್ಸ್ಟಿಟುಯನ್ಸಿ ಇದೆ. ಟಿಚರ್ ಕಾನ್ಸ್ಟಿಟುಯನ್ಸಿ ಇದೆ ಅಲ್ಲಿ ಆರಿಸಿ ಬಂದಿದ್ದಾರೆ, ಅಲ್ಲಿ ಅವರಿಗೆ ಮತ ಹಾಕುವ ಹಕ್ಕು ಇದೆ. ಹಿಂದೆ ತಾಲ್ಲೂಕು ಬೋರ್ಡ್ ಇದ್ದಾಗ, ವಿಧಾನಸಭಾ ನನ್ನ ಕ್ಷೇತ್ರದಲ್ಲಿ ಮೂರು ತಾಲ್ಲೂಕುಗಳಲ್ಲಿ ವೋಟು ಹಾಕುವ ಅಧಿಕಾರ ನಮಗೆ ಬರುತ್ತಿತ್ತು. ಒಂದೊಂದು ತಾಲ್ಲೂಕಿನಲ್ಲಿ ೧೦-೧೦ ಹಳ್ಳಿಗಳು ಬರುತ್ತಿದ್ದು, ನಮ್ಮ ತಾಲ್ಲೂಕಿನಲ್ಲಿ ಮೂರು ತಾಲ್ಲೂಕುಗಳಲ್ಲಿ ಓಟು ಹಾಕತಕ್ಕ ಅಧಿಕಾರವಿದೆ. I have voted. ಈಗ ಮಾನ್ಯ ಫೋರ್ಪಡೆಯವರು ಮೂರು ಜಿಲ್ಲೆಗಳಲ್ಲಿ ಓಟು ಹಾಕಲಿಕ್ಕೆ ಅಧಿಕಾರವಿದೆ. ಅವರ ರಾಯಚೂರು ಲೋಕಸಭಾ ಕ್ಷೇತ್ರಕ್ಕೆ ಮೂರು ಜಿಲ್ಲೆಗಳು ಒಳಪಡುತ್ತವೆ. ಮಾನ್ಯ ಮೊಯಿಲಿಯವರು ಸರ್ಕಾರವನ್ನು ೪೨೦ ಸೆಕ್ಷನ್ ಕೆಳಗೆ ಪ್ರಾಸಿಕ್ಯೂಟ್ ಮಾಡಬಹುದೆನ್ನುವ ಮಾತನ್ನು ಹೇಳಿದರು.

(ಗೊಂದಲ)

SRI M. VEERAPPA MOILY.—I have not named the Government please go through the records.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಪೋಜಿಸನ್ ಪ್ರಾಸಿಕ್ಯೂಟ್ ಏನು ಮಾಡಬಹುದು ?

ಶ್ರೀ ಎಂ. ವೀರಪ್ಪಮೊಯಿಲಿ.—ನೀವು ಇಷ್ಟರವರೆಗೆ ಅಪೋಜಿಸನ್ ಲೀಡರ್ಸ್ ಅಪೋಜಿಸನ್ ಮೆಂಬರ್ಸ್‌ಗಳನ್ನು ಏನೂ ಬಿಟ್ಟಿಲ್ಲ. You have committed. ಅಪೋಜಿಸನ್ ಲೀಡರ್ಸ್‌ನ್ನು ಕೊಲ್ಲಲಿಕ್ಕೆ ಪ್ರಯತ್ನ ಮಾಡಿದ್ದೀರಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ, ಅವರು ಮಾತನಾಡಿ ಆಯಿತು, ನಾನು ಮುಂದುವರಿಸುತ್ತೇನೆ. ಉದಾಹರಣೆಗೆ ಒಂದು ಸಣ್ಣ ಪ್ರಶ್ನೆ ಎಲೆಕ್ಟೋರಲ್ ರೋಲ್ ಪ್ರಕಾರ ಹೇಳಿದ್ದಾರೆ. ಅನೇಕ ಕಡೆ ಒಬ್ಬ ವೋಟರನ್ನು ವೋಟು ಹಾಕಲಿಕ್ಕೆ ಅವಕಾಶ ಕೊಡುವುದು ನ್ಯಾಯ ಸಮ್ಮತವಿಲ್ಲ. ಅದಕ್ಕೆ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ ಅದನ್ನು ನಾವು ಒಪ್ಪುವುದಿಲ್ಲ. But it is one argument.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಮಾತನಾಡುವಾಗ ನಾವು ಸುಮ್ಮನಿರಬೇಕೆಂದು ಹೇಳುತ್ತೀರಿ. ಈಗ ನಾವು ಮಾತನಾಡುವಾಗಅವರು ಶಾಂತರೀತಿಯಿಂದ ಕೇಳಬೇಕು. ತಮ್ಮ ಮನ ಒಲಿಸಬೇಕೆಂದು ಆರ್ಗ್ಯುಮೆಂಟ್ ತಮ್ಮ ಮುಂದೆ ಇಟ್ಟಿದ್ದೇವೆ, ಅವರ ಉತ್ತರ ಕೇಳುವುದಕ್ಕಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಸನ್ಮಾನ್ಯ ಗುಂಡಯ್ಯಶೆಟ್ಟಿಯವರು......

ಅಧ್ಯಕ್ಷರು.--ಶ್ರೀ ವೀರಪ್ಪನವರೇ...

ಶ್ರೀ ಎಂ. ವೀರಪ್ಪ ಮೊಯಿಲಿ.—ಟೆರಿಟೋರಿಯಲ್ ಜುರಿಸ್ಡಿಕ್ಷನ್ ಬಗ್ಗೆ ನಾನು ಹೇಳು ತ್ತಿರುವುದು...

ಅಧ್ಯಕ್ಷರು.—ಸಾಯಂಕಾಲದವರೆಗೆ ಚರ್ಚೆಯಾದರೆ ಅರ್ಥ ಏನು? ನೀವು ಹೆಸರಾಂತ ವಕೀಲರು ಇದ್ದೀರಿ. ಕೋರ್ಟಿನಲ್ಲಿ ಆರ್ಗ್ಯುಮೆಂಟ್ ಆಗುವಾಗ ಆ ಕಡೆ, ಈ ಕಡೆ ಇಬ್ಬರ ಮಾತನ್ನೂ ಕೇಳುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಟೆರಿಟೋರಿಯಲ್ ಜುರಿಸ್ಡಿಕ್ಷನ್ ಬಗ್ಗೆ ಒಂದು ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ಅದೇನೆಂದರೆ, ಶ್ರೀ ಗುಂಡಯ್ಯಶೆಟ್ಟಿಯವರು ಆರಿಸಿ ಬಂದಿದ್ದು ಎಲ್ಲಿಂದ? ಪದವೀಧರ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ಅವರು ಕೋಲಾರ ಜಿಲ್ಲೆಯವರು, ಆದರೆ ಅವರಿಗೆ ರಾಯಚೂರು, ಬೀದರ್ ಜಿಲ್ಲೆಯಲ್ಲಿ ಟೂರ್ ಮಾಡಲಿಕ್ಕೆ ಅಧಿಕಾರ ಕೊಟ್ಟಿದ್ದಾರೆ. ಹೀಗಾದರೆ ಟೆರಿಟೋರಿಯಲ್ ಜ್ಯುರಿಸ್ಡಿಕ್ಷನ್ ಎಲ್ಲಿಂದ ಬರುತ್ತದೆ? ಒಂದು ಉದಾಹರಣೆಯನ್ನು ಕೊಡು ತ್ತಿದ್ದೇನೆ ಅಷ್ಟೆ. ಇಲ್ಲದಿದ್ದರೆ ಶ್ರೀ ಗುಂಡಯ್ಯಶೆಟ್ಟಿಯವರ ಪ್ರಶ್ನೆ ಇಲ್ಲಿ ಏತಕ್ಕೆ ಇತ್ತು?

ಅಧ್ಯಕ್ಷರು.—ಶ್ರೀ ವೀರಪ್ಪಮೊಯಿಲಿಯವರೇ, ನೀವು ಭಾಷಣ ಮುಗಿಸಬೇಕೆಂದು ಮಾಡಿ ದ್ದೀರೋ ಇಲ್ಲವೋ?

ಶ್ರೀ ಎಂ. ವೀರಪ್ಪಮೊಯಿಲಿ.—ಈಗ ಬೊಮ್ಮಾಯಿಯವರು ಹೇಳಿದರು. ನಾನು ಹೇಳಿದ್ದುದು ಏನು? Suppose the law is dishonestly interpreted. then I think, if there is a law to prosecute the Government under Section 420, it could be done, I said I have not named the Government. That is how I said. Suppose the Government

itself interprets the law dishonestly, then I think the people should be empowered to file a case and prosecute the Government under Section 420...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಅಮೇಲೆ ಈಗ ಏನಾಗಿದೆ ಎಂದರೆ,

ಅಧ್ಯಕ್ಷರು.—ನೀವು ನಿಲ್ಲಿಸಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಲುವಳಿ ಸೂಚನೆಗೆ ಆಕ್ಷೇಪಣೆ ಇದ್ದಹಾಗೆ ಕಾಣುತ್ತದೆ. ಆಗ ೨೩ ಜನ ಸದಸ್ಯರು ತಮ್ಮ ಸಹಾಯಕ್ಕಾಗಿ ಎದ್ದುನಿಂತು ತಮ್ಮ ಒಪ್ಪಿಗೆಯನ್ನು ಕೇಳಬೇಕಾಗುತ್ತದೆ. ೬೩ನೇ ನಿಯಮದಲ್ಲಿ ಇದು ಇದೆ.

(ಗೊಂದಲ)

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ನೀವು ಸ್ಪೀಕರ್ ಆಗಿದ್ದು ಆರು ವರ್ಷ ಕಾಲ ಕೆಲಸ ಮಾಡಿದ್ದೀರಿ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಚರ್ಚೆ ನಡೆಸಿರುವುದೂ ಇದೆ. ತಾವು ಬೇಕಾದರೆ ದಾಖಲೆ ತೆಗೆದು ನೋಡಿ.

ಅಧ್ಯಕ್ಷರು.—ಈಗ ವಿರೋಧಪಕ್ಷದ ನಾಯಕಿಯವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನನ್ನ ಮನವಿ ಏನು ಎಂದರೆ...

(ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರು ಎದ್ದು ನಿಂತರು)

ಶ್ರೀ ಎಂ. ವೀರಪ್ಪ ಮೊಯಿಲಿ.—೬೨(೨) ನಿಯಮದ ಪ್ರಕಾರ ಆಕ್ಷೇಪಣೆಗಳು ಬಂದರೆ ತಮಗೆ ಸಹಾಯ ಮಾಡಲಿಕ್ಕೆ ಸದಸ್ಯರು ಎದ್ದುನಿಂತರೆ ತಾವು ಅನುಮತಿ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ನಾನು ಇನ್ನೂ ಅನುಮತಿಯನ್ನು ಕೊಟ್ಟಿಲ್ಲ. ಇದೇನು ಹೊಸ ಪದ್ಧತಿಯನ್ನು ತಂದಿರಿ? ಹಾಗೆ ಅನುಮತಿ ಕೊಡಲಿಕ್ಕೆ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ ೬೩ನೇ ನಿಯಮದಲ್ಲಿ ಸ್ಪಷ್ಟವಾಗಿ ಹೇಳಿದೆ—

೬೩(೧) ಅಧ್ಯಕ್ಷರು, ೬೦ನೇ ನಿಯಮದ ಮೇರೆಗೆ ಒಪ್ಪಿಗೆ ಕೊಟ್ಟರೆ ಮತ್ತು ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿದೆಯೆಂದು ಅಭಿಪ್ರಾಯಪಟ್ಟರೆ ಪ್ರಶ್ನೋತ್ತರಗಳ ತರುವಾಯ ಹಾಗೂ ಕಾರ್ಯಕ್ರಮಗಳ ಪಟ್ಟಿಯಲ್ಲಿರುವ ಇತರ ವಿಷಯಗಳನ್ನು ಪ್ರಾರಂಭಿಸುವುದಕ್ಕೆ ಮುಂಚೆ ಸಂಬಂಧಪಟ್ಟ ಸದಸ್ಯನ ಹೆಸರನ್ನು ಕರೆಯಬೇಕು. ಅಂಥ ಸದಸ್ಯನು ತನ್ನ ಸ್ಥಾನದಲ್ಲಿ ಎದ್ದುನಿಂತು ಸದನದಲ್ಲಿ ನಿಲುವಳಿ ಸೂಚನೆಯನ್ನು ತರಲು ಅನುಮತಿಯನ್ನು ಕೇಳತಕ್ಕದ್ದು....

'ಪರಂತು, ನಿಲುವಳಿ ಸೂಚನೆಯಲ್ಲಿ ತಿಳಿಸಿರುವ ವಿಷಯದ ಬಗ್ಗೆ ಪೂರ್ಣ ಸಂಗತಿ ಅಧ್ಯಕ್ಷರ ಬಳಿ ಇಲ್ಲದಿದ್ದರೆ ಅವರು ಒಪ್ಪಿಗೆ ಕೊಡುವ ಅಥವಾ ನಿರಾಕರಿಸುವುದಕ್ಕೆ ಮುಂಚೆ ನಿಲುವಳಿ ಸೂಚನೆಯನ್ನು ಸದನದಲ್ಲಿ ಓದಬೇಕು ಹಾಗೂ ಮಂತ್ರಿಯಿಂದ ಅಥವಾ ಸಂಬಂಧಪಟ್ಟ ಸದಸ್ಯರಿಂದ ಸಂಕ್ಷಿಪ್ತ ವಿವರಣೆಯನ್ನು ಪಡೆಯಬೇಕು. ಅನಂತರ ನಿಲುವಳಿ ಸೂಚನೆಯನ್ನು ಅಂಗೀಕರಿಸುವ ವಿಷಯದಲ್ಲಿ ತನ್ನ ನಿರ್ಣಯವನ್ನು ತಿಳಿಸತಕ್ಕದ್ದು. (೨) ನಿಲುವಳಿ ಸೂಚನೆಯನ್ನು ತರಲು ನೀಡಲಾದ ಅನುಮತಿಗೆ ಆಕ್ಷೇಪಣೆಗಳು ಬಂದಲ್ಲಿ ಅಧ್ಯಕ್ಷರು ಆ ನಿಲುವಳಿ ಸೂಚನೆಯು ಸಭೆಯಲ್ಲಿ ಬರಬೇಕೆಂದು ಬಯಸುವ ಸದಸ್ಯರುಗಳು ತಮ್ಮ ಸ್ಥಾನಗಳಲ್ಲಿ ಎದ್ದುನಿಲ್ಲುವಂತೆ ವಿನಂತಿಸಿಕೊಳ್ಳಬೇಕು. ೨೩ ಸದಸ್ಯರುಗಳಿಗೆ ಕಡಿಮೆ ಇಲ್ಲದಷ್ಟು ಸದಸ್ಯರು ಎದ್ದುನಿಂತರೆ ನಿಲುವಳಿ ಸೂಚನೆಗೆ ಅನುಮತಿ ಸಿಕ್ಕಿದೆ ಎಂದು ಸದನಕ್ಕೆ ತಿಳಿಸಬೇಕು...''

ಎಂದು ಇದೆ.

೩–೦೦ ಪಿ. ಎಂ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಇನ್ನು ಇದಕ್ಕೆ ಕನ್‌ಸೆಂಟ್ ಕೊಟ್ಟಿಲ್ಲ. ಕನ್‌ಸೆಂಟ್ ಕೊಟ್ಟ ಮೇಲೆ ಈ ಪ್ರಶ್ನೆ ಬರುತ್ತದೆ. ನಾನು ಇನ್ನೂ ರೂಲಿಂಗ್ ಕೂಡ ಕೊಟ್ಟಿಲ್ಲ.

SRI S. BANGARAPPA.—If objection is taken by the treasury benches or by any others, then, we have to stand.

(ಗೊಂದಲ)

ಅಧ್ಯಕ್ಷರು.—ಈಗ ತಾವೆಲ್ಲಾ ಸಭೆ ನಡೆಯುವುದಕ್ಕೆ ಅವಕಾಶ ಕೊಡಬೇಕು. ಮಾನ್ಯ ಮೊಯಿಲ್ಲಿಯವರು ಬಹು ದಿವಸಗಳಿಂದ ಈ ಸದನದಲ್ಲಿದ್ದಾರೆ. ಅವರು ಮಂತ್ರಿಗಳಾಗಿಯೂ ಕೆಲಸ ಮಾಡಿದ್ದಾರೆ. ನಾನು ನಿಮ್ಮನ್ನು ಕೇಳಿಕೊಂಡು, ಅವರನ್ನು ಕೇಳಿಕೊಂಡು ಮುಂದೆ ರೂಲಿಂಗ್ ಕೊಡಬೇಕು.

> "The Speaker, if he gives consent under rule 60 and holds that the matter proposed to be discussed is in order, shall after the questions and before the list of business is entered upon, call the member concerned who shall raise in his place and ask for leave to move the adjournment of the House."

'If he gives consent'

ಎಂದು ಇದೆ. ದಯಮಾಡಿ ರೂಲ್ಸ್ ನೋಡಿ. ನಾನು ಕನ್ಸೆಂಟ್ ಕೊಟ್ಟ ಮೇಲೆ ಆ ಪ್ರಶ್ನೆ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಒಂದೇ ಒಂದು ಉದಾಹರಣೆ ಕೊಡುತ್ತೇನೆ.

ಅಧ್ಯಕ್ಷರು. ನೀವು ಈಗಾಗಲೇ ಸಾಕಷ್ಟು ಆರ್ಗ್ಯುಮೆಂಟ್ ಮಾಡಿದ್ದೀರಿ. ಒಂದಲ್ಲ ೧೦ ಉದಾಹರಣೆ ಕೊಟ್ಟಿದ್ದೀರಿ. ನಾನು ಈಗ ರೂಲಿಂಗ್ ಕೊಡಬೇಕು, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ತಾವೆಲ್ಲರೂ ಸಾಕಷ್ಟು ವಿಷಯವನ್ನು ಸರ್ಕಾರದ ಎದುರಿಗೆ ಇಟ್ಟಿದ್ದೀರಿ. ಎರಡೂವರೆ ಗಂಟೆಗಳ ಕಾಲ ತಮಗೆ ಅವಕಾಶ ಕೊಟ್ಟಿದ್ದೇನೆ. ಅವರೂ ಕೂಡ ಸಮಂಜಸವಾದ ಉತ್ತರ ಕೊಟ್ಟಿದ್ದಾರೆ. ನಾನು ಈ ನಿಲುವಳಿ ಸೂಚನೆಯನ್ನು ರಿಜೆಕ್ಟ್ ಮಾಡಿದ್ದೇನೆ. ಈಗ ಮುಂದಿನ ವಿಷಯ ಗಮನಸೆಳೆಯುವ ಸೂಚನೆ. ಮಾನ್ಯ ಖರ್ಗೆಯವರೇ ನಿಮಗೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಕಾಲಾವಕಾಶ ಕೊಡುತ್ತೇನೆ. ತಾವು ಬಹಳ ದಿವಸಗಳಿಂದ ಈ ಸದನದಲ್ಲಿ ಇದ್ದೀರಿ. ಮಂತ್ರಿಗಳಾಗಿಯೂ ಕೆಲಸ ಮಾಡಿದ್ದೀರಿ. ಶಾಸಕರಾಗಿಯೂ ಕೆಲಸ ಮಾಡಿದ್ದೀರಿ. ಈಗ ಉಪನಾಯಕರಾಗಿಯೂ ಕೆಲಸ ಮಾಡುತ್ತಿದ್ದು ಒಳ್ಳೆಯ ಹೆಸರು ತೆಗೆದುಕೊಳ್ಳುತ್ತಿದ್ದೀರಿ. ನಾನು ಈಗಾಗಲೇ ರೂಲಿಂಗ್ ಕೊಟ್ಟದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಸೆಂಬ್ಲಿಯಿಂದ ಚುನಾಯಿತರಾಗಿ ಬಂದಂಥ ನಾಲ್ಕಾರು ಜನರ ಹತ್ತಿರ ಅಡ್ರಸ್ ತೆಗೆದುಕೊಂಡು, ರಾತ್ರೋರಾತ್ರಿ ಫೋನ್ ಮಾಡಿ, ಹಳ್ಳಿಯಲ್ಲಿ ನಿಮ್ಮ ಹೆಸರನ್ನು ಬರೆಯಿಸಿ, ಅಲ್ಲಿಯ ವಿಳಾಸ ಕೊಡಿ ಎಂದು ಫೋನ್ ಮಾಡಿದ್ದಾರೆ. ಅದನ್ನು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಅದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಇದಕ್ಕೆ ಸಮರ್ಪಕವಾದ ಉತ್ತರವನ್ನು ಅವರು ಕೊಡುತ್ತಿಲ್ಲ, ಡಿಫೆಕ್ಟೀವ್ ವೋಟರ್ಸ್ ಲಿಸ್ಟ್ ಮಾಡಿದ್ದಾರೆ. ಇವತ್ತಿನ ದಿವಸ ಪ್ರಜಾಪ್ರಭುತ್ವದ ಕೊಲೆ ಆಗುತ್ತಿದೆ, ಇದನ್ನು ವಿರೋಧಿಸಿ ನಾವು ವಾಕೌಟ್ ಮಾಡಿ ಹೋಗುತ್ತಿದ್ದೇವೆ.

(ವಿರೋಧ ಪಕ್ಷದ ನಾಯಕರು, ಮತ್ತಿತರ ಕಾಂಗ್ರೆಸ್ (ಐ) ಪಕ್ಷದ ಸದಸ್ಯರುಗಳ ಜೊತೆಗೆ ಸಭಾತ್ಯಾಗ ಮಾಡಿದರು)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾವು ಒಂದು ಪ್ರಿವಿಲೇಜ್ ಮೋಷನ್ ಕೊಟ್ಟು ಮೂರು ದಿವಸ ಆಯಿತು. ತಾವು ಈ ದಿವಸ, ಇವತ್ತು ನಾಳೆ ಎಂದು ಹೇಳುತ್ತಿದ್ದೀರಿ. ನಾಳೆ ದಿವಸ ಮತ್ತೊಂದು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟರೆ ಮತ್ತೆ ಇದು ಹಿಂದೆ ಹೋದರೆ ಏನು ಮಾಡುತ್ತೀರಿ ? ನಾಳೆ ದಿವಸ ಅಡ್ಜರ್ನ್‌ಮೆಂಟ್ ಮೋಷನ್, ಏನೇ ಬಂದರೂ ಇದನ್ನು ತೆಗೆದುಕೊಳ್ಳುತ್ತೇನೆ ಎಂದರೆ ಪರವಾಗಿಲ್ಲ.

ಅಧ್ಯಕ್ಷರು.—ನಾಳೆ ನಿಮಗೆ ಮೊದಲನೆಯ ಅವಕಾಶ ಕೊಡುತ್ತೇನೆ, ತಾವು ಈಗ ಕುಳಿತುಕೊಳ್ಳಿ.

ಈಗ ಗಮನಸೆಳೆಯುವ ಸೂಚನೆಗಳು. ಶ್ರೀ ಜಿ. ಎಸ್. ಆಚಾರ್, ಶ್ರೀ ಡಿ. ಟಿ. ಜಯಕುಮಾರ್, ನಿಮ್ಮ ಸೂಚನೆಗಳನ್ನು ನಾಳೆ ತೆಗೆದುಕೊಳ್ಳುತ್ತೇನೆ. ಆರ್. ವೆಂಕಟರಾಮಯ್ಯನವರೇ ತಮ್ಮ ಕಾಲಿಂಗ್ ಅಟೆನ್‌ಷನ್. ತಾವು ಕೇಳಿ.

ಗಮನ ಸೆಳೆಯುವ ಸೂಚನೆ

(೧) ಸ್ಟೈಪೆಂಡರಿ ಗ್ರಾಜುಯೇಟ್ಸ್ ಧರಣಿ ಸತ್ಯಾಗ್ರಹ ಮಾಡುತ್ತಿರುವುದು

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಲ್).—ಮಾನ್ಯ ಅಧ್ಯಕ್ಷರೇ ಸ್ಟೈಪೆಂಡರಿ ಗ್ರಾಜುಯೇಟ್ಸ್ ೧೦ ಸಾವಿರ ಜನ, ಕಬ್ಬನ್‌ಪಾರ್ಕ್‌ನಲ್ಲಿ ಕುಳಿತಿದ್ದಾರೆ. ಇಂದಿನಿಂದ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಚಾರದಲ್ಲಿ ನಾನೂ ಸಹ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಸ್ಟೈಪೆಂಡರಿ ಗ್ರಾಜುಯೇಟ್ಸ್ ಸಮಸ್ಯೆ ಹೊಸದೇನೂ ಅಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಸ್ಟೇಟ್‌ಮೆಂಟ್ ಬಂದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಓರಲ್ ಆಗಿ ಹೇಳುತ್ತೇನೆ. ಇದು ಹೊಸದೇನೂ ಅಲ್ಲ. ಇದು ಬಹಳ ವರ್ಷಗಳಿಂದ ನಡೆದು ಬಂದ ಸಮಸ್ಯೆ. ಕಳೆದ ಮೂರೂವರೆ ವರ್ಷಗಳಲ್ಲಿ ಎಷ್ಟರಮಟ್ಟಿಗೆ ಅವರಿಗೆ ಕಾಯಿದೆ ಮೇರೆಗೆ ಸಹಾಯ ಮಾಡುವುದಕ್ಕೆ ಸಾಧ್ಯವೋ ಅಷ್ಟರಮಟ್ಟಿಗೆ ನಾವು ಮಾಡಿದ್ದೇವೆ. ನಮಗೆ ಇವರ ಸೇವೆಯನ್ನು ಸ್ಥಿರೀಕರಣಗೊಳಿಸುವುದಕ್ಕೆ ಇರತಕ್ಕಂಥ ಮುಖ್ಯವಾದ ತೊಂದರೆ ಹೈಕೋರ್ಟಿನಲ್ಲಿ ಅದಂಥ ಜಡ್ಜ್‌ಮೆಂಟು. ಇವರನ್ನು ಖಾಯಂ ಮಾಡಬೇಕು ಮತ್ತು ಇವರ ಜೊತೆಗೆ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ಖಾಯಂ ಮಾಡಬೇಕು ಎಂದು ಯೋಚನೆ ಮಾಡಿದಾಗ, ನಿರ್ಧಾರ ತೆಗೆದುಕೊಂಡಾಗ, ಬೇರೆಯವರು ಹೈಕೋರ್ಟ್‌ಗೆ ರಿಟ್ ಅರ್ಜಿ ಹಾಕಿ, ಅದರಲ್ಲಿ ಆಗಿರತಕ್ಕಂಥ ನಿರ್ಣಯ ಏನೆಂದರೆ, ಖಾಲಿ ಇರತಕ್ಕಂಥ ಹುದ್ದೆಗಳಲ್ಲಿ ಶೇಕಡ ೫೦ ರಷ್ಟನ್ನು ಸ್ಟೈಪೆಂಡರಿ ಪದವೀಧರರು ಮತ್ತು ಸ್ಥಾನೀಕ ಅಭ್ಯರ್ಥಿಗಳಿಗೆ ಹುದ್ದೆಗಳನ್ನು ಮೀಸಲಿಡಬೇಕು ಎಂಬುದು. ಈಗ ಅವರು ಏನಿದ್ದಾರೆ ಈ ೫೦ ಪರ್ಸೆಂಟ್‌ನಲ್ಲಿ ಅವರನ್ನು ಆಯ್ಕೆ ಮಾಡಬೇಕೆಂದು ಹೇಳತಕ್ಕ ತೀರ್ಮಾನ. ಇವರಿಗೆ ೧೯೮೮ನೇ ಇಸವಿಯಲ್ಲಿ ೧೫೦ ರೂಪಾಯಿಗಳು ಸಿಗುತ್ತಿತ್ತು. ಆಗ ಇವರಿಗೆ ಯಾವ ತರಹ ವಿಶೇಷ ಜವಾಬ್ದಾರಿ ಇವರ ಮೇಲೆ ಹಾಕಿರಲಿಲ್ಲ. ಸೇವಾ ನಿಯಮಗಳು ಇವರಿಗೆ ಅನ್ವಯಿಸುತ್ತಿರಲಿಲ್ಲ. ನಮ್ಮ ಸರಕಾರ ಬಂದಮೇಲೆ ಇವರ ತೊಂದರೆಗಳನ್ನು ತಿಳಿದು ಇವರ ವೇತನವನ್ನು ನಾವು ಹೆಚ್ಚು ಮಾಡಿದ್ದೇವೆ, ಎರಡು ಸಲ ಮಾಡಿದ್ದೇವೆ. ೧೯೮೪ರಲ್ಲಿ ೨೦೦ ರೂಪಾಯಿಗಳಿಂದ ೩೦೦ ರೂಪಾಯಿ ವರೆಗೆ, ಅದೇ ೮೪ರ ಡಿಸೆಂಬರ್ ತಿಂಗಳಲ್ಲಿ ೩೦೦ ರೂಪಾಯಿಗಳಿಂದ ೪೯೦ ರೂಪಾಯಿಗಳವರೆಗೆ ಮಾಡಿದ್ದೇವೆ. ಪ್ರವಾಸ ಮಾಡತಕ್ಕಂಥ ಭತ್ಯವನ್ನೂ ಅವರಿಗೂ ಕೊಡುತ್ತೇವೆ. ಮತ್ತು ಇವರಿಗೆ ಸರಕಾರಿ ಸೇವೆಯಲ್ಲಿ ಖಾಯಂ ಆಗಿ ಸೇರಲಿಕ್ಕೆ ತೊಂದರೆ ಆಗಕೂಡದು ಎಂದು ಹೇಳತಕ್ಕಂಥ ದೃಷ್ಟಿಯಿಂದ ಇವರ ವಯಸ್ಸಿನ ನಿರ್ಬಂಧವನ್ನೂ ತೆಗೆದುಹಾಕಿದ್ದೇವೆ, ವಯೋಮಿತಿಯನ್ನು ಏರಿಸಿದ್ದೇವೆ. ಈಗ ಅವರ ಬೇಡಿಕೆ ಏನೆಂದರೆ ತಮ್ಮನ್ನು ಖಾಯಂ ಮಾಡಿ ಎಂದು. ಈ ವಿಚಾರ ಪುನಃ ನಾನು ನಮ್ಮ ಸಂಪುಟದ ಮುಂದೆ ಬರುವ ಸಭೆಯಲ್ಲಿ ಅಥವಾ ಅದಕ್ಕೂ ಮುಂದಿನ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಬಯಸಿದ್ದೇನೆ. ಬೇರೆ ಬೇರೆ ಖಾತೆಯಿಂದ ವಿವರವನ್ನು ತರಿಸಿದ್ದೇವೆ. ಆದರೆ ಒಂದು ಮಾತನ್ನು ನಾನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.